ಶ್ರೀರಂಗರ ಬೇರೆ ಪ್ರಕಟನೆಗಳು

ನಾಟಕಗಳು—

ಉದರವೈರಾಗ್ಯ . . .	೧	೦	೦
ವಿರಾಟಪುರುಷ . . .	೦	೧೨	೦
ವೈದ್ಯರಾಜ	೧	೦	೦
ದರಿದ್ರನಾರಾಯಣ . .	೦	೧೨	೦
ಹರಿಜನ್ವಾರ	೦	೧೨	೦
ನರಕದಲ್ಲಿ ನರಸಿಂಹ . .	೦	೬	೦
ಪರಮೇಶ್ವರ ಪುಲಕೇಶಿ. .	೦	೧೨	೦
ಪೂರ್ವರಂಗ (ಏಕಾಂಕಸಂಗ್ರಹ)	೦	೧೨	೦

ಗದ್ಯಗ್ರಂಥಗಳು—

ಶಾರದೆಯ ಸಂಸಾರ ಇಲ್ಲವೆ ಭಾಷಾಶಾಸ್ತ್ರ

ಕವಾಲ ಪಾಶಾ

ಈ ಪುಸ್ತಕಗಳು ಯಾವಾಗಲೂ
ದೊರೆಯುವ ಸ್ಥಳ

ಜಯಂತಿ ಕಾರ್ಯಾಲಯ
— ಧಾರವಾಡ —

ತಾರಾವಿಹಾರ ಗ್ರಂಥಮಾಲೆಯ ಎರಡನೆಯ ಬಾಣ

ಋತುಸಂಹಾರ

ಪ್ರೊ. ಗೋಕಾಕರ ಮುನ್ನುಡಿ ಸಾರಥ್ಯದಲ್ಲಿ

ಬಾಣವನ್ನು ಬಿಟ್ಟವರು

ಶ್ರೀರಂಗ

ಪ್ರಕಾಶಕರು:

ತಾರಾವಿಹಾರ ಗ್ರಂಥಮಾಲೆಯ ಸಂಪಾದಕರು

ಬೆಲೆ ೦—೬—೦

ಮುದ್ರಕರು :
ವೆಂಕಟೇಶ ಮಾಧವರಾವ ಜೋಶಿ
ಮೋಹನ ಮುದ್ರಣಮಂದಿರ,
ಧಾರವಾಡ.

ಪ್ರಥಮ ಮುದ್ರಣ
ಮಾರ್ಚ ೧೯೩೯

ಪ್ರಕಾಶಕರು :
ಶ್ರೀ. ಸ್ವಾಮಿರಾಯಾಚಾರ್ಯರು
ತಾರಾವಿಹಾರ ಗ್ರಂಥಮಾಲೆಗಾಗಿ
ಪ್ರೇಮಾಯತನಾಶ್ರಮದಲ್ಲಿ
ಪ್ರಕಟಿಸಿದ್ದು.

ಅನುಕ್ರಮಣಿಕೆ

ಅ ರಿ ಕೆ

ತಾರಾವಿಹಾರ ಗ್ರಂಥಮಾಲೆಯ ಉದ್ದೇಶವು ವಾಚಕರಿಗೆ ಈಗಾಗಲೆ ವಿದಿತವಿದೆ. ಈ ಎರಡನೆಯ ಬಾಣವನ್ನು ಬಿಟ್ಟವರು ಶ್ರೀರಂಗ—ಪ್ರೊಫೆಸರ ಆರ್. ವ್ಹಿ. ಜಾಗಿರದಾರ; ಇವರ ಲಕ್ಷ್ಯಭೇದಿಯಾದ ಧನುರ್ಧಾರಿತ್ವವೂ ವಿದಿತವೆ ಇದೆ; ನಮ್ಮೆಲ್ಲರನ್ನು ಉಪಕೃತರನ್ನಾಗಿ ಮಾಡಿ, ಲೇಖನಿಯು ಗಾಂಡೀವದಂತೆ ಎಂದು ತೋರಿಸಿ ಮುನ್ನುಡಿ ಬರೆದ ಪ್ರೊ. ವಿ. ಕೃ. ಗೋಕಾಕ ಇವರಾದರೂ ಪರಿಚಿತರೆ. ಆದ್ದರಿಂದ ‘ ಇದು ಸೂರ್ಯ, ಈತ ಜಯದ್ರಥ ’ ಎಂಬಂತೆ ಕೈಮಾಡಿ ತೋರಿಸುವುದಿಷ್ಟೆ ನಮ್ಮ ಕೆಲಸ.

ಋತುಸಂಹಾರದ ವಿಷಯ-ಶೈಲಿಗಳಿಗೂ ನಮ್ಮ ಉದ್ದೇಶವಾದ ವಿಚಾರಕ್ರಾಂತಿಗೂ ಹೊಂದಿಕೆ ಹೇಗೆ—ಎಂದು ಯಾರಿಗಾದರೂ ಸಂಶಯ ಬಂದಲ್ಲಿ ಪ್ರೊ. ಗೋಕಾಕರ ಮುನ್ನುಡಿಯಲ್ಲಿಯೆ ಉತ್ತರವಿದೆ ಎಂದು ಹೇಳುವೆವು.

ತಾರಾವಿಹಾರ ಗ್ರಂಥಮಾಲೆಯ ಪುಸ್ತಕಗಳಿಗೆ ನಿಜಾಮ ಸರಕಾರದ ಪ್ರತಿಬಂಧವೆಂಬ ಸುಳ್ಳುಸುದ್ದಿ ನಿಜಾಮನಾಡಿನಲ್ಲಿ ಹಬ್ಬಿತ್ತು. ನಿಜಾಮ ಕನ್ನಡದ ವಾಚಕಮಹಾಶಯರೂ ಆ ಗ್ರಂಥಗಳನ್ನೋದಲು ಸಂಕೋಚ ಪಟ್ಟುಕೊಳ್ಳುತ್ತಿದ್ದರು. ಆದರೆ ಈ ವಿಷಯಕ್ಕೆ ಸಂಬಂಧಪಟ್ಟ ಯೋಗ್ಯ ಅಧಿಕಾರಿಗಳನ್ನು ವಿಚಾರಿಸಲು **ಈ ಗ್ರಂಥಗಳಿಗೆ ಯಾವ ಪ್ರತಿಬಂಧಕವೂ ಇಲ್ಲವೆಂದು** ತಿಳಿದುಬರುತ್ತದೆ.

ಈಗಾಗಲೆ ಗ್ರಂಥಮಾಲೆಗೆ ಧನಸಹಾಯ ಮಾಡಿದ ಮಹನೀಯರಿಗೆ ನಾವು ತುಂಬಾ ಋಣಿಯಾಗಿದ್ದೇವೆ. ಈ ಸಾರೆಯ ಗ್ರಂಥಪ್ರಕಟನೆಗೆ ನಮ್ಮ ಪರಮಸ್ನೇಹಿತರಾದ ಶ್ರೀಮಾನ್ **ವೀರಭದ್ರಪ್ಪ ಮಟಮರಿ** ಇವರು ತುಂಬಾ ಸಹಾಯ ಮಾಡಿರುವರೆಂದು ತಿಳಿಸಲು ಸಂತೋಷವಾಗುತ್ತದೆ. ಹಾಗೆಯೇ ಹನುಮಾಪೂರದ ಶ್ರೀಮಾನ್ ರೆಡ್ಡೀಬಂಧುಗಳೂ ಸಹ ಗ್ರಂಥ ಮಾಲೆಗೆ ಉದಾರಾಶ್ರಯ ಕೊಟ್ಟಿರುತ್ತಾರೆಂಬುದೂ ಪ್ರೋತ್ಸಾಹಪರ ಸಂಗತಿಯೇ ಸರಿ.

ಶ್ರೀ. ಶ್ರೀ. ಮಂತ್ರಾಲಯ ಸ್ವಾಮಿಗಳವರ ೧೦೦ ರೂಪಾಯಿ ದೇಣಿಗೆಯ ಆಶ್ವಾಸನ! ರಾಯರ ಮಠಾಧೀಶರಾದ ಶ್ರೀ. ಶ್ರೀ. ಮಂತ್ರಾಲಯ ಸ್ವಾಮಿಗಳವರು ಒಂದುನೂರು ರೂಪಾಯಿ ಕೊಟ್ಟು ಗ್ರಂಥಮಾಲೆಗೆ ಆಶೀರ್ವದಿಸುವದಾಗಿ ವಚನವಿತ್ತಿರುವರೆಂದು ತಿಳಿಸಲು ನಮಗೆ ಸಂತೋಷ ವಾಗುತ್ತದೆ.

ಶ್ರೀಮಾನ್ ಪೊಳ್ಳಾ ಓಬಳಯ್ಯ ರಾಮಪೂರ ಇವರು ಗ್ರಂಥಮಾಲೆಗೆ ರೂ. ೫೦-೦-೦ ಯ ದೇಣಿಗೆಯ ವಚನ ಕೊಟ್ಟಿರುವದು ಅವರ ಉದಾರ ಹೃದಯದ್ಯೋತಕವಾಗಿದೆ. ಅನೇಕ ಸನ್ಮಿತ್ರರ ಸಲಹೆ ಸೂಚನೆಗಳ ಮೇರೆಗೆ ಈ ಸಾರೆಯ ಸಂಚಿಕೆಯನ್ನು ಯಥಾಶಕ್ತಿ ಸುಧಾರಿಸಲಾಗಿದೆ. ಇನ್ನು ಮುಂದಾದರೂ ಗ್ರಂಥಗಳನ್ನು ಸರ್ವತೋಮುಖವಾಗಿ ಸುಧಾರಿಸಲು ಪ್ರಯತ್ನಮಾಡಲಾಗುವದು. ನಮ್ಮ ಈ ಋಣಭಾರವು ಹೆಚ್ಚಿದಂತೆ ಬಾಣಗಳ ಜೋರು ಹೆಚ್ಚಾಗುವ್ರದೆಂದು ಬೇರೆ ಹೇಳಬೇಕೆ?

ಪ್ರೇಮಾಯತನಾಶ್ರಮ
ತುಂಗಭದ್ರಾ. } **ಸಂಪಾದಕರು**

ಋತುಸಂಹಾರದ ಪರಿಚಯ

'ಋತುಸಂಹಾರ'ವನ್ನು ಕನ್ನಡಿಗರಿಗೆ ನಾನೇ ಪರಿಚಯಮಾಡಿ ಕೊಡಬೇಕೆಂದು ಪ್ರೊ. ಜಾಗಿರದಾರರು ಸ್ನೇಹಪೂರ್ವಕವಾಗಿ ಹೇಳಿದರು. ಅದಕ್ಕೆ ನಾನು ಸಂತೋಷದಿಂದ ಒಪ್ಪಿಕೊಂಡೆ. ಅವರು ಬರೆದ ಇಂಥ ಕೆಲವು ಲೇಖಗಳನ್ನು ನಾನು ಓದಿ ಆನಂದಿಸಿದ್ದೆನು. ಅವುಗಳನ್ನು ಪುಸ್ತಕರೂಪವಾಗಿ ಪ್ರಕಟಿಸಬಾರದೇಕೆಂದು ಸಹ ಕೇಳಿದೆನು. ಮುಂದೆ ತಿಂಗಳೊಪ್ಪತ್ತಿನಲ್ಲಿ ಅಂತಹದೊಂದು ಪುಸ್ತಕದ ಪರಿಚಯವನ್ನೇ ನಾನು ಮಾಡಬೇಕೆಂದು ಪ್ರೊ. ಜಾಗಿರದಾರರು ಒಂದು ಸುಸಂಧಿಯನ್ನು ಒದಗಿಸಿಕೊಟ್ಟರು. ಅದಕ್ಕೆ ಮೇಲೆ ಹೇಳಿದಂತೆ ನಾನು ಸಂತೋಷದಿಂದ ಒಪ್ಪಿಕೊಂಡೆ. ಹತ್ತಾರು ಜನ ಸಾಹಿತಿಗಳು ಕನ್ನಡದಲ್ಲಿ ಕೆಲಸ ಮಾಡುತ್ತಿರುವಾಗ ಅವರ ನಡುವೆ ತಪ್ಪು ತಿಳುವಳಿಕೆಗಳು ಬೆಳೆದರೆ ಅದು ಕನ್ನಡದ ದುರ್ದೈವವೇ ಸರಿ. ನಮ್ಮ ಸಿದ್ಧಾಂತಗಳೇನೆ ಇರಲಿ, ಕಲಾರೀತಿಗಳು ಎಂತಹವೇ ಇರಲಿ,—ನಮ್ಮೆಲ್ಲರ ಕೃತಿಗಳ ಬೆಲೆಯು ನಾಳೆ ತನಗೆ ತಾನೆ ಕಟ್ಟುವದು. ನಾಳಿನ ನಿರ್ಣಯುಗಳನ್ನು ಇಂದಿಗೆ ಕಲ್ಪಿಸಿಕೊಂಡು ಸಾಹಿತಿಗಳು ಕಡಿದಾಡಬೇಕೆ ? ಅವರೆಲ್ಲರೂ ಕೂಡಿ ಪರಸ್ಪರ ಸ್ನೇಹದಿಂದ ಬೆಳೆದರೆ ಕನ್ನಡವೂ ಬೆಳೆದು ದೊಡ್ಡ ಮರವಾದೀತು. ಇಂತಹ ಸ್ನೇಹಭಾವದಿಂದ ಪ್ರೊ. ಜಾಗಿರದಾರರು ನನಗೆ ಈ ಒಲವಿನಪ್ಪಣೆ ಯನ್ನಿತ್ತರು. ಅದರಲ್ಲಿ ಅವರ ದೊಡ್ಡಿತೆಯಿದೆ.

ಪ್ರೊ. ಜಾಗಿರದಾರರು ಜಗತ್ತನ್ನು ವಿಮರ್ಶಾತ್ಮಕ ದೃಷ್ಟಿಯಿಂದ ಪರೀಕ್ಷಿಸಿ ಅದರಲ್ಲಿದ್ದ ಕುಂದುಕೊರತೆಗಳನ್ನೆಲ್ಲ ಬಯಲಿಗೆಳೆದು ಪೂರ್ಣತೆ

ಯೆಂದರೇನೆಂಬುದನ್ನು ವ್ಯಂಗ್ಯವಾಗಿ ತೋರಿಸತಕ್ಕವರು. ಇಂಥ ಪ್ರತಿಭೆ ಇದ್ದವರು ನಮ್ಮ ನಾಡಿನಲ್ಲಿ ಬಹಳವಾಗಿ ಬೇಕಾಗಿದ್ದಾರೆ,–ಪೂರ್ಣತೆಯನ್ನೇ ಸ್ಫುಟವಾಗಿಸಿ ಕುಂದುಕೊರತೆಗಳನ್ನೇ ವ್ಯಂಗ್ಯವಾಗಿ ಚಿತ್ರಿಸುವ ಕಲಾಶಾಲಿಗಳಿಗಿಂತ ಒಂದು ವೇಳೆ ಹೆಚ್ಚಾಗಿ ಬೇಕಾಗಿದ್ದಾರೆ. ಅಲ್ಲದೆ ಪ್ರೊ. ಜಾಗಿರದಾರರು ಸಮಾಜಸುಧಾರಕರಾಗಿ ಮಾತ್ರ ನಿಲ್ಲದೆ ತಮ್ಮ ಕಾಣ್ಕೆಗೆ ಹೊಸ ಕಲೆಯ ಮೆರುಗನ್ನೂ ಕೊಡಲು ಹವಣಿಸಿದ್ದಾರೆ. ಕನ್ನಡ ನಾಟ್ಯಕಲೆಯ ಸುಧಾರಕರಲ್ಲಿ ಇವರು ಬಹಳ ಪ್ರಮುಖವಾದ ಸ್ಥಾನವನ್ನು ಸಂಪಾದಿಸಿದ್ದಾರೆ.

ಮೊನ್ನೆ ಮೊನ್ನೆ ನಾನು ಅವರನ್ನು ಕಾಣಲು ಹೋದಾಗ ಜಾಗಿರದಾರರು ಭಗವದ್ಗೀತಾರಹಸ್ಯವನ್ನು ಬರೆಯುತ್ತ ಕುಳಿತಿದ್ದರು. "ಇಷ್ಟು ಬೇಗನೆ!" ಎಂದು ನಾನು ಕೇಳಿದೆ. ಅವರೂ ನಕ್ಕರು. ಆದರೆ ಈ ರಹಸ್ಯಮಯ ಗ್ರಂಥಕ್ಕಿಂತ ಮೊದಲು ಅವರು 'ಋತುಸಂಹಾರ' ಮೊದಲಾದ ಗದ್ಯಲೇಖಗಳನ್ನು ಬರೆದಿದ್ದಾರೆ. ಇವುಗಳಲ್ಲಿದ್ದ ಸಮಾಜವಿಮರ್ಶೆಯು ಬಹಳ ಮನನೀಯವಾಗಿದೆ. ಬೀಳಲಾಗಿರುವ ಸಮಾಜಕ್ಕೆ ಬಾರಕೋಲಿನ ಪೆಟ್ಟು ಕೊಡುವದು ಮೊದಲಿಗೆ ಪ್ರೊ. ಜಾಗಿರದಾರರ ಚಟವಾಗಿತ್ತು. ಆದರೆ ಅವರ ವ್ಯಕ್ತಿತ್ವವು ಇತ್ತೀಚೆಗೆ ಮಾರ್ಪಡಹತ್ತಿದೆ. ಕಟುಟೀಕೆಗಿಂತ ವಿಡಂಬನಾತ್ಮಕ, ಕರುಣಾಮಯ ಹಾಸ್ಯವೇ ಅವರ ಕೃತಿಗಳಲ್ಲಿ ನೆಲೆಗೊಳ್ಳಹತ್ತಿದೆ. ಕೆಲವೊಂದು ಏಕಾಂಕ ನಾಟಕಗಳಲ್ಲಿ ಮೊದಲಿಗೆ ಕಂಡುಬಂದ ಈ ಮಾರ್ಪಾಟು ಇವರ ಗದ್ಯಪ್ರಬಂಧಗಳಲ್ಲಿ ಪ್ರಬಲವಾಗಹತ್ತಿದೆ. ಎರಡನೆಯ 'ಋತುಸಂಹಾರ' ಲೇಖದಲ್ಲಿ ಇಂತಹ ಪ್ರತಿಭೆಯು ವಿಶೇಷ ಶೋಭೆಯನ್ನು ತಳೆದಿರುವದು ಕಂಡುಬರುವದು.

ಇಂತಹ ಪ್ರತಿಭೆಯೇ ಜೀವಾಳವಾದ ಈ ಗದ್ಯಲೇಖಗಳಿಗೆ ಸಾಹಿತ್ಯದಲ್ಲಿ ಒಂದು ವಿಶಿಷ್ಟವಾದ ಸ್ಥಾನವಿದೆ. ಕ್ಲಿಷ್ಟವಾದ, ಸಾಮ್ಯವನ್ನು ಎಳೆದು ತಂದುಹಚ್ಚಿದ ಕೆಲವು ವಿನೋದಗಳನ್ನು ಬಿಟ್ಟರೆ ಇವರ ಶೈಲಿಯು ತಡೆಯಿಲ್ಲದೆ ನಡೆಯುತ್ತದೆ. 'ನಾನು', 'ನನ್ನ ಗೆಳೆಯರು' ಮುಂತಾದ ಕಿವಿ

ತುಗಳನ್ನೊಳಗೊಂಡ ಇವರ 'ಹರಟೆ' ಇಲ್ಲವೆ ಪ್ರಬಂಧಗಳು ಕನ್ನಡದಲ್ಲಿ
ಾಗಲೆ ಬೆಳಕೆಯಲ್ಲಿ ಬಂದ ಒಂದು ವಿಶಿಷ್ಟ ಸಾಹಿತ್ಯಪ್ರಕಾರದೊಡನೆ
ುವ ಆಪ್ತಸಂಬಂಧವನ್ನು ತೋರಿಸುತ್ತವೆ. ಆದರೆ ಒಂದು ಸ್ಪಷ್ಟೀ
ಶವು ಜಾಗಿರದಾರರ ಲೇಖಗಳನ್ನು ಇಂಥ ಪ್ರಬಂಧಗಳಿಂದ ಬೇರೆಯಾಗಿ
ತ್ತದೆ. ರಸಾನುಭವವೇ ಹರಟೆಗಳ ಹುಟ್ಟನ್ನೂ ಸಾರ್ಥಕ್ಯವನ್ನೂ
ರ್ಣಿಸುವ ಮಾತಾಗಿದೆ. ವಿಷಯವು ಅಲ್ಲಿ ಅಷ್ಟು ಮುಖ್ಯವಾದುದಲ್ಲ.
ರೆ ಜಾಗಿರದಾರರ ಲೇಖಗಳಲ್ಲಿ ಸಮಾಜವಿಮರ್ಶೆಯೇ ಮುಖ್ಯವಾದ
ತು. ಇದನ್ನು ರಸಾನುಭವದ ದ್ವಾರವಾಗಿ ಅವರು ಕೊನೆಗಾಣಿಸು
ರೆ. ಕೆಲವೊಂದು ಸಾಮಾನ್ಯ ಗುಣಗಳನ್ನೊಳಗೊಂಡ ಇಂಥ ಲೇಖಗಳ
ಾಲೆಯನ್ನೇ ಬರೆದು ಲೇಖಕರು ತಮ್ಮ ಕೃತಿಗಳ ವೈಶಿಷ್ಟ್ಯವನ್ನು
ಷ್ಟವಾಗಿಸಿದ್ದಾರೆ.

'ಋತುಸಂಹಾರ' ಮಾಲೆಯ ಸಾಮಾನ್ಯ ಗುಣಗಳಲ್ಲಿ ಪುರಾಣ
ಹಾಕೃತಿಯೊಂದು. ನವೀನ ಸಮಾಜಪುರುಷನಿಗೆ ಜಾಗಿರದಾರರು
ರಾಣದೇಹವೊಂದನ್ನು ಕಲ್ಪಿಸಿದ್ದಾರೆ. ಇವರ ಸಂಸ್ಕೃತ ಪಾಂಡಿತ್ಯವು
ಾತನಧರ್ಮದ ಅಸ್ತಿತ್ವಕ್ಕೇ ಮುಳುವಾಗಿದೆಯೆಂದು ಕೆಲವರಿಗೆ
ೀರಿದರೂ ನವೀನ ಸಂಸ್ಕೃತಿಯ ಮಂಡನೆಗೆ ಅದು ಬಹಳ ಸಹಾಯ
ರಿಯಾಗಿದೆ. ಇವರ 'ಅಹಲ್ಯೋದ್ಧಾರ'ದಂತಹ ಕೃತಿಗಳಿಂದ ಸಮಾಜ
ಧಾರಣೆಯಾದರೂ ಧಾರ್ಮಿಕ ವೃತ್ತಿಗೆ ನೋವಾಗುವದು ಇಲ್ಲವೆ ಚಕ್ರ
ುವದೆಂದರೆ, 'ಋತುಸಂಹಾರ', ಇಲ್ಲವೆ 'ರಾಮ್ ರಾಮ್ ರಾಜ್ಯ'ದ
ಗ್ಗೆ ಇಂಥ ಪ್ರಶ್ನೆಯೇಳುವದೇ ಶಕ್ಯವಿಲ್ಲ. ಎದ್ದರೆ ಅದು ಪ್ರಶ್ನೆಯಲ್ಲ,
ಕಪಿಶಾಚ. ಬಳಕೆಮಾತಿಗಿಂತ ಗ್ರಾಂಥಿಕ ಶೈಲಿಯನ್ನು ಉಪಯೋಗಿ
ದ್ದರೆ "ರಾಮ್ ರಾಮ್ ರಾಜ್ಯ"ವು ಇನ್ನೂ ಹೆಚ್ಚು ಸುಂದರವಾಗು
ತ್ತು.

ವೇದಾಂತಿಯು ಜಗತ್ತಿನ ಅಪೂರ್ಣತೆಯನ್ನು ನೋಡಿ ಹೆಜ್ಜೆಹೆಜ್ಜೆಗೆ.
ಗಿ ನಗುವಂತೆ, ಸಮಾಜದ ಅಪೂರ್ಣತೆಯನ್ನು ಕಂಡು ಜಾಗಿರದಾರರು

ಅಡಿಗಡಿಗೆ ಮರುಗುತ್ತಾರೆ, ನಗುತ್ತಾರೆ. ಸ್ವೇಚ್ಛಾ ಪ್ರವಾಸ ತಿಕೀಟನ್ನು (Z ne Ticket) ಕುರಿತು ಬರೆದ ಇವರ ಲೇಖದಲ್ಲಿ ಎಂತಹ ಭೀಕರವಾದ ವಿಡಂಬನೆಯು ಅಡಕವಾಗಿದೆ! ಆದರೆ ಈ ಭೀಕರತೆಯು ವಿನೋದದ ಉತ್ಕಟತೆಯಾಗಿ ಮಾರ್ಪಡುತ್ತದೆ. ಇಂತಹ ಮಾರ್ಪಾಟಿನಿಂದ ಓದುಗನಿಗೆ ಸುಖವಾಗುತ್ತದೆ; ಅವನ ಬುದ್ಧಿಯೂ ಜೇತರಿಸಿಕೊಳ್ಳುತ್ತದೆ. ಸಕ್ಕರೆಯ ಆವರಣವಿದ್ದ ಕ್ವಿನೀನ್ ಮಾತ್ರೆಯನ್ನು ತೆಗೆದುಕೊಂಡ ರೋಗಿಯಂತೆ. ಸಕ್ಕರೆಯಿಲ್ಲದ ಕ್ವಿನೀನ್ ಮಾತ್ರೆಗಳನ್ನು ತೆಗೆದುಕೊಳ್ಳಬೇಕೆಂದೂ ಒಮ್ಮೊಮ್ಮೆ ವೈದ್ಯರು ಹೇಳುವದುಂಟು,—ಸಕ್ಕರೆಯಲ್ಲಿ ಬೆರೆಸಿದ ಕ್ವಿನೀನು ಕೆಲವರಿಗೆ ಪಚನವಾಗಿ ಬಿಟ್ಟು ಗುಣಕೊಡದೆ ಹೋಗಬಹುದಾದ ಕಾರಣ. ಆದರೆ ವಾಸ್ತವಿಕವಾಗಿ ನೋಡಿದರೆ ಸಿಟ್ಟಿಗಿಂತ ಕರುಣಾಮಯ ಹಾಸ್ಯವೇ ಮೇಲು; ಕಲೆಯ ನಿರ್ಬಂಧಗಳನ್ನು ಮೀರಿದ ವಿಡಂಬನೆಗಿಂತ ವ್ಯಂಗ್ಯಪೂರ್ಣ ವಿನೋದವೇ ಹೆಚ್ಚು. ಜಾಗಿರದಾರರ ಕಲಾವಂತಿಕೆಯು ಈಗ ಕಾತು ಹಣ್ಣಾಗಹತ್ತಿದೆ. ಪಕ್ವವಾದಂತೆ ಅದು ಹೆಚ್ಚು ಹೆಚ್ಚಾಗಿ ರುಚಿಯಾಗುತ್ತ ಹೋಗುವದರಲ್ಲಿ ಸಂಶಯವಿಲ್ಲ.

ಸಮಾಜವಿಮರ್ಶೆಯನ್ನೇ ತಮ್ಮ ಕಲಾವಸ್ತುವನ್ನಾಗಿ ಮಾಡಿದ ಇಂದಿನ ಸಾಹಿತಿಗಳಲ್ಲಿ ಕೈಲಾಸಂ, ಕಾರಂತ, ಜಾಗಿರದಾರ,--ಈ ತ್ರಿಮೂರ್ತಿಗಳ ಕೂಟವು ಎದ್ದು ಕಾಣುವದು. ಇವರು ಕನ್ನಡದ ಇಬ್ಸೆನ್, ಗಾಲ್ಸವರ್ದಿ ಹಾಗು ಶಾ ಎಂದು ಹೇಳಿದರೆ ಕೇವಲ ಗ್ರಂಥಗಳ ಸಂಖ್ಯೆಯ ಹಾಗು ಗಾತ್ರದ ಪ್ರಮಾಣವನ್ನು ನೋಡಿದರೂ ಅತಿಶಯೋಕ್ತಿಯಾಗುವದು. ಇಂಥ ಅಸ್ಫುಟವಾದ ಹೋಲಿಕೆಗಳಿಂದ ಪ್ರಯೋಜನವಿಲ್ಲ. ಆದರೆ ಇವರ ಸಾಹಿತ್ಯಶಕ್ತಿಗಳು ಅದೇ ಮಾದರಿಯಲ್ಲಿ ಸಾಗಿವೆಯೆಂಬ ಮಾತನ್ನು ನಾವು ಒಪ್ಪಬಹುದು. ಇಬ್ಸೆನ್ನನಂತೆ ಕೈಲಾಸಂರವರಲ್ಲಿ ಪದ್ಯಕಾವ್ಯಶಕ್ತಿಯಿದೆ, ವಾಸ್ತವಿಕ ನಾಟ್ಯಸೃಷ್ಟಿಯ ಹಿರಿಮೆಯಿದೆ. 'ಈ ಲೇಖಕನಿಗೆ ದಯೆಯೇ ಅರಿವಿಲ್ಲ' ಎಂದು ಕೌಶಿಕಾವತಾರವನ್ನು ತಾಳಿದ ಕಾರಂತರು ಹೇಳಿದರೂ ಅವರ ಕಲಾರೀತಿಯಲ್ಲಿ ಸಾತ್ವಿಕ ಸಂತಾಪವಿದೆ, ಸಹಾನುಭೂತಿಯೂ ಇದೆ. ಛಾಯಾರೂಪಕ ಹಾಗು ನಾಟ್ಯ-ಸಂಗೀತಗಳ ಮೇಳವನ್ನು ಅವರ

'ಮುಕ್ತದ್ವಾರ' ಮೊದಲಾದ ಕಲಾಕೃತಿಗಳಲ್ಲಿ ಗಾಲ್ಸವರ್ದಿಗಿದ್ದ ಸೌಂದರ್ಯ ದರ್ಶನವಿದೆ, ಅವನಿಗೆ ಅಷ್ಟೊಂದಾಗಿರದ ಅಸ್ಸ ಲಲಿತಕಲಾಭಿರುಚಿಯಿದೆ. ಜಾಗಿರದಾರರಲ್ಲಿ 'ಶಾ'ನಿಗಿರುವಂತಹ ವಿಡಂಬನೆಯಿದೆ, ದಿಟ್ಟತನವಿದೆ; ಪುಸ್ತಕಪಾಂಡಿತ್ಯ ಇಲ್ಲವೆ ಸಂಪ್ರದಾಯದೊಡನೆ ಪಾಂಡಿತ್ಯಮಯವಾದ, ರಸಮಯವಾದ ಬಿಡಿಪಾಟವಿದೆ; ವಿನೋದವಿದೆ; ಮಾತಿನ ಚಮತ್ಕಾರವಿದೆ ನವೀನ ಸಮಾಜಪುರುಷನ ಮೂರು ದೃಷ್ಟಿಗಳಂತಿದ್ದ ಈ ಮೂರು ಕಲಾರೀತಿಗಳು ಇಂದಿನ ಕರ್ನಾಟಕಕ್ಕೆ ಅತ್ಯವಶ್ಯವಾಗಿ ಬೇಕಾಗಿವೆ.

ಆದರೆ ಮೇಲೆ ಹೇಳಿದಂತೆ ನಿರ್ಣಾಯಕ ವಿಮರ್ಶೆಯ ಅಗತ್ಯವು ಇಲ್ಲಿ ಅಷ್ಟೊಂದಿಲ್ಲ; ಪರಿಚಯಾತ್ಮಕ ವಿಮರ್ಶೆಯಲ್ಲಿ ಅಡಕವಾದಷ್ಟು ಮಾತ್ರ ಇಲ್ಲಿ ಬಂದಿದೆ. ಜಾಗಿರದಾರರ ಕಲಾವಂತಿಕೆಯನ್ನು ತಿಳಿಯಲು ಮೇಲಿನ ಮಾತುಗಳು ಸಹಾಯಕಾರಿಯಾಗುವವೆಂದು ನಾನು ನಂಬಿದ್ದೇನೆ.

ದಿನದಿನಕ್ಕೆ ಹೆಚ್ಚಳವನ್ನು ಹೊಂದಿ ಕನ್ನಡನಾಡಿಗೆ ಕಾಣ್ಕೆಯ ಮೇಲೆ ಕಾಣ್ಕೆಯನ್ನು ಕೊಡುತ್ತ ಜಾಗಿರದಾರರ ಪ್ರತಿಭೆಯು ಬಹುಕಾಲ ಬೆಳಗಲೆಂದು ನಾನು ಹಾರೈಸುತ್ತೇನೆ; ಅವರ ಮುಂದಿನ ಕೃತಿಗಳಿಗಾಗಿ ಎದುರು ನೋಡುತ್ತಿದ್ದೇನೆ.

ಸಾಂಗಲಿ
೧೫-೧-೧೯೩೯.

ವಿ. ಕೃ. ಗೋಕಾಕ.

ಹಣೆಬರೆಹ

ಕರ್ನಾಟಕದ ಅನೇಕ ಸಂಪಾದಕರು ನನ್ನೊಡನೆ ಇನ್‌ಕಮ್‌ಟ್ಯಾಕ್ಸ್ ಆಫೀಸರರಂತೆ ವರ್ತಿಸತೊಡಗಿದ್ದಾರೆಂದು ಕೊನೆಗೊಮ್ಮೆ ತಮ್ಮೆಲ್ಲರಿಗೆ ಹೇಳಿಬಿಡುವೆ. ಬರೆಯುವುದು ನನ್ನ ವೈಭವವೆಂದು ನಾನು ತಿಳಿದದ್ದೇ ತಪ್ಪು ಆಯಿತೇನೊ! ಅಂತೂ ಆ ನನ್ನ ವೈಭವಕ್ಕೆ ಟ್ಯಾಕ್ಸ್ ಬಿದ್ದಿತು. ವರ್ಷಕ್ಕೆ ಇಂತಿಷ್ಟು ಪ್ರಮಾಣದಿಂದ ಲೇಖಗಳನ್ನು ಈ ಸಂಪಾದಕರಿಗೆ ಸಲ್ಲಿಸಬೇಕಾಯಿತು. ಈ ಲೇಖಗಳಲ್ಲಿ ಏನಾದರೂ ಅತಿಶಯೋಕ್ತಿ ಇದ್ದರೆ ಅದು ಇನ್‌ಕಮ್‌ಟ್ಯಾಕ್ಸ್ ರಿಟರ್ನಗಳಿಗೆ ಪರಿಚಿತವಾದದ್ದೆಂದು ಬಗೆದು ಕ್ಷಮಿಸಬೇಕು ನನ್ನನ್ನು. ಹೇಗಾದರೂ ಮಾಡಿ ಕಾಲಂ (column) ತುಂಬುವುದು—ಎಂಬುದೇ ಉದ್ದೇಶವಾಗಿತ್ತು ನನಗೆ.

ನನ್ನ ದುರ್ದೈವ ಇಷ್ಟಕ್ಕೆ ತೀರಲಿಲ್ಲ. ಒಮ್ಮೆ ಪ್ರೊಫೆಸರ ಗೋಕಾಕರು ನನಗೆ ಕಾಲಮ್ಮಿಗಾಗಿ ಹರಟೆ ಕೊಚ್ಚುವ ಕಲೆ ಸಾಧಿಸಿದೆ ಎಂದರು. ಬಹಳ ದಿವಸಗಳ ತರುವಾಯ ಭೆಟ್ಟಿಯಾದಲ್ಲಿ ಸಂತೋಷದ ಮಾತುಗಳನ್ನಾಡಿದ ಅವರ ಸೌಜನ್ಯವನ್ನು ನಾನು ತಪ್ಪು ತಿಳಿದುಕೊಂಡೆನೊ ಏನೊ! ಅಂತೂ ಅಧೈರ್ಯ ಹೆಚ್ಚಾಗಿ 'ತಾವು ನನಗೆ ಲೇಖೀ ಸರ್ಟಿಫಿಕೇಟ್ಟನ್ನೆ ಕೊಟ್ಟರೆ ಒಳಿತು' ಎಂದೆ. ಅವರು ಒಪ್ಪಿದರು. ಆ ಮಹಾನುಭಾವತೆಗಾಗಿ ನಾನು ಅವರಿಗೆ ಅತ್ಯಂತ ಋಣಿಯಾಗಿದ್ದೇನೆ.

ಈ ಲೇಖಗಳ ಸಂಗ್ರಹ ಮಾಡುವುದೆಂದರೆ ಲಂಕಾನಗರಿಯಲ್ಲಿ ಸೀತಾದೇವಿಯನ್ನು ಶೋಧಿಸುವಷ್ಟು ದುಸ್ತರವೆನಿಸಿತು. ದಿನಪತ್ರಿಕೆಯ ಸಂಚಿಕೆಗಳಲ್ಲಿ ಹಂಚಿಹೋದ ಇವುಗಳನ್ನು ಕೂಡಿಸುವುದೆಂತು? ಈ ಸಮಯಕ್ಕೆ ನನ್ನ ವಿದ್ಯಾರ್ಥಿಯಾದ ಶ್ರೀಮಾನ್ ರೊಟ್ಟಿ ಎಂಬವರು ತಮ್ಮ ಮಿತ್ರಮಂಡಳಿಯನ್ನೆ ಶೋಧಕ ಸೈನ್ಯವನ್ನಾಗಿ ಮಾಡಿದರು. ಇವೆಲ್ಲ ಲೇಖಗಳನ್ನು ಕೂಡಿಸಿ ಅಚ್ಚಿಗಾಗಿ ಒಂದು ಪ್ರತಿಯನ್ನು ತಯ್ಯಾರು ಮಾಡಿದ ಹುಬ್ಬಳ್ಳಿಯ ಮಿತ್ರಮಂಡಳಿಗೆ ನಾನು ಉಪಕಾರಬದ್ಧನಾಗಿರುವೆ.

ಹುಬ್ಬಳ್ಳಿಯ ದಿನಪತ್ರಿಕೆಯಾದ 'ಲೋಕಮತ'ದ ಸಂಪಾದಕರು ತಮಗೆ ಒಪ್ಪಿಸಿದ ಲೇಖಗಳನ್ನು ತಿರುಗಿ ನನಗೆ ಒಪ್ಪಿಸಿ ಆ ಕೆಲಸಕ್ಕಾಗಿ ಅನುಕೂಲತೆಗಳನ್ನು ಒದಗಿಸಿ ಕೊಟ್ಟು ನನ್ನನ್ನು ಕೃತಜ್ಞನನ್ನಾಗಿ ಮಾಡಿದ್ದಾರೆ.

ಈ ಲೇಖಗಳನ್ನು ಓದಿ ವಾಚಕರಿಗೂ 'ಋತುಸಂಹಾರ'ದ ಸಾಕ್ಷಾತ್ಕಾರವಾದರೆ ನಾನು ಧನ್ಯನಾದೆ. ಇಲ್ಲವಾದರೆ ತಾರಾವಿಹಾರದ ಪ್ರಕಾಶಕರಿಗೆ ನನ್ನಂತಹರ ಲೇಖಗಳನ್ನು ಪ್ರಕಟಿಸುವ ದುರ್ಬುದ್ಧಿ ಇನ್ನೊಮ್ಮೆ ಬರಬಾರದಾಗಿ ಬೇಡಿಕೊಳ್ಳುವ,

ಶ್ರೀರಂಗ

೧. ಋತುಸಂಹಾರ

(ಒಂದು ಭೀಕರ ಕಾವ್ಯಸೃಷ್ಟಿ)

ಕಾಳಿದಾಸನು ಮಹಾಕವಿ ಎಂದು ಎಲ್ಲರಂತೆ ನನಗೂ ಈಗ ಹೆದರಿಕೆಯಾಗುತ್ತಿದೆ. ಮಹಾಕವಿಯಾಗಿದ್ದಿಲ್ಲವೆಂದರೆ ಭೂತ–ನಭೂತ–ಅದ್ಭುತಗಳ ಇಷ್ಟೊಂದು ಸೂಕ್ಷ್ಮಜ್ಞಾನವು ಅವನಿಗಿರಬಹುದಾಗಿತ್ತೆ? ಕಾಳಿದಾಸನು ತ್ರಿಕಾಲದರ್ಶಿ ಎಂಬ ಮಾತಿನಲ್ಲಿ ಇನ್ನೂ ಯಾರಿಗಾದರೂ ಸಂಶಯವಿದ್ದರೆ ಅವರು ಅವನ ಋತುಸಂಹಾರವನ್ನು ನೋಡಬಹುದು. ಆ ಕಾವ್ಯದಲ್ಲಿ ಮಳೆ–ಚಳಿ–ಬೇಸಗೆ ಮೂರು ಕಾಲಗಳ ಜ್ಞಾನವಿದೆ ಎಂಬುದಿಷ್ಟೆ ಆಧಾರದಿಂದ ನಾನು ಹೀಗೆ ಹೇಳುವುದಿಲ್ಲ. ಇಲ್ಲವೆ, ಇಂದಿನಂತೆ ಮುಂದಾಗಲಿ ಮತ್ತೆಂದಾದರೂ ಆಗಲಿ ಮಳೆಗಾಲದಲ್ಲಿ ಮಳೆ, ಚಳಿಗಾಲದಲ್ಲಿ ಚಳಿ, ಬೇಸಗೆಯಲ್ಲಿ ಬಿಸಿಲು ಇದ್ದೇ ಇರುವುದೆಂದು ಕಾಳಿದಾಸನು ಭವಿಷ್ಯ ನುಡಿದನೆಂದೂ ನಾನು ಹೀಗೆ ಹೇಳುವುದಿಲ್ಲ. ಯಾಕೆಂದರೆ, ಸಾಮಾನ್ಯವಾಗಿ ರಾತ್ರಿ–ರತಿ–ಬೆಳ್ದಿಂಗಳು ಮುಂತಾಗಿ ರವಿ ಕಾಣದ ವಸ್ತುಗಳನ್ನೆ ಕಾಣುವ ಶಕ್ತಿಯುಳ್ಳ ಅನೇಕ ಕವಿಗಳು ಇಂತಹ ಭವಿಷ್ಯವನ್ನು ನುಡಿದಿದ್ದಾರೆ. 'ಋತುಸಂಹಾರ'ದ ತ್ರಿಕಾಲಜ್ಞಾನವು ದೇಶ-ಕಾಲ–ಪರಿಸ್ಥಿತಿಗಳಿಂದ ಅಬಾಧಿತವಾದ ಶಾಶ್ವತಸತ್ಯದ ಸ್ಫುಲಿಂಗವಾಗಿದೆ. ಇಷ್ಟೇಕೆ? 'ಋತುಸಂಹಾರ'ದ ಮೊದಲ ಶ್ಲೋಕದ ಕೊನೆಯ ಪಾದವನ್ನು ನೋಡಿದರೆ ನಾನು ಹೇಳಬೇಕೆನುವುದು ಸಾಕ್ಷಾತ್ಕಾರದಂತೆ ಹೊಳೆಯುವುದು. "ನಿದಾಘಕಾಲಃ ಸಮುಪಾಗತಃ, ಪ್ರಿಯೇ" ಎಂಬುದೇ ಆ ಕೊನೆಯ ಪಾದ.

ನಮ್ಮ ವಿವೇಚನೆಗೆ 'ಪ್ರಿಯೇ' ಎಂಬ ಶಬ್ದವನ್ನು ತಾತ್ಕಾಲಿಕ ವಾಗಿ ಬಿಟ್ಟು ನೋಡೋಣ. ಯಾಕೆಂದರೆ ಕವಿಗಳ ಪ್ರಿಯತಮೆಯರು ಸಾಮಾನ್ಯವಾಗಿ ಕಾಲ್ಪನಿಕರಾಗಿರುವರು, ಇದಲ್ಲದೆ—ಅಥವಾ ಆ ಗೊಡವೆ ನಮಗೇಕೆ? ಇನ್ನುಳಿದುವು 'ನಿದಾಘಕಾಲಃ ಸಮುಪಾಗತಃ (ಬೇಸಗೆ ಬಂದಿತು)' ಎಂಬ ಶಬ್ದಗಳು. 'ಋತುಸಂಹಾರ'ವು ಬೇಸಗೆ ಕಾಲದಿಂದಲೆ ಪ್ರಾರಂಭವಾದುದರ ರಹಸ್ಯವು ಇದುವರೆಗೆ ಯಾವ ಮಲ್ಲಿನಾಥನಿಗೂ ತಿಳಿಯದೆ ಹೋಯಿತೆಂದು ಹೇಳಬಹುದು; ಯಾರೂ ಅದನ್ನು ವಿವೇಚಿಸಲು ಯತ್ನ ಕೂಡ ಮಾಡಿಲ್ಲ! ತಿಳಿಯುವುದಾದರೂ ಹೇಗೆ? 'ಸಂಹಾರ' ಎಂದರೆ ಸಾಕ್ಷಾತ್ತಾಗಿ ಕೊಲ್ಲುವುದು ಎಂಬ ಶಾಬ್ದಿಕ ಅರ್ಥದಿಂದ ಮೋಸಹೋಗಿದ್ದಾರೆ ಎಲ್ಲರು. ಕವಿಗೆ ಶಬ್ದಕ್ಕಿಂತ ಅಲಂಕಾರ ಹೆಚ್ಚು ಪ್ರಿಯ, ಅತ ಏವ ಶಾಬ್ದಿಕ ಅರ್ಥಕ್ಕಿಂತ ಆಲಂಕಾರಿಕ ಅರ್ಥವು ಹೆಚ್ಚು ಇಷ್ಟ ಎಂಬುದು ಮರ್ತ್ಯಮಾನವನ ಮಿದುಳಿಗೆ ಹೊಳೆಯಲಿಲ್ಲ. ದೇಹದ ಸಂಹಾರಕ್ಕಿಂತ ಆತ್ಮದ ಸಂಹಾರವೆ ನಿಜವಾದ ಸಂಹಾರ. ಆದರೆ ಆತ್ಮವು ಅಮರವಲ್ಲವೆ? **ಕಾವ್ಯದಲ್ಲಿ ಸುತರಾಂ ಅಲ್ಲ** ಎಂದೇ ಹೇಳಬೇಕಾಗುವುದು. ಏನೇ ಇರಲಿ, ಬೇಸಗೆಯಲ್ಲಿ ಆತ್ಮದ ಸಂಹಾರವಾಗುವುದು ಎಂಬುದರ ಸೂಕ್ಷ್ಮಜ್ಞಾನವು, ಭವಿಷ್ಯಜ್ಞಾನವು ಕಾಳಿದಾಸನಿಗಾಗಿತ್ತು; ಅದಕಾಗಿ ಅವನು ಬೇಸಗೆಯೊಳಗಿನ ಸಂಹಾರ ದಿಂದ ತನ್ನ 'ಋತುಸಂಹಾರ'ವನ್ನು ಪ್ರಾರಂಭಿಸಿದ್ದಾನೆ!

ವಾಚಕರೆ–ಅಥವಾ–ವಿದ್ಯಾರ್ಥಿಗಳೆ, ಈ ಸಂಹಾರವು ಯಾವುದೆಂಬುದನ್ನು ನಿಮಗೆ ನಾನು ಬೇರೆಯಾಗಿ, ಬಿಡಿಯಾಗಿ ಹೇಳಬೇಕೆ? ಈ (ಆತ್ಮ) ಸಂಹಾರವು ಸಾಮಾನ್ಯವಾಗಿ ಬೇಸಗೆಯಲ್ಲಿಯೆ ನಡೆಯುವುದಿಲ್ಲವೆ? ಅಥವಾ ಭಾರತೀಯ ಸಂಸ್ಕೃತಿಯನ್ನೆ ಮರೆತ ನಿಮಗೆ ಈ ಸಂಹಾರದ ಕಲ್ಪನೆಯೆ ಆಗಲಿಕ್ಕಿಲ್ಲ; ಅದಕಾಗಿ ನಿಮ್ಮ ಶಬ್ದಗಳಲ್ಲಿ, ನಿಮ್ಮ ಪರಿಭಾಷೆಯಲ್ಲಿ ಹೇಳುವೆ– 'ಮ್ಯಾ-ಸೆ-ಕ-ರಾ' (Massacre).

ಪ್ರತಿ ಋತುವಿನ ಸಂಹಾರದಲ್ಲಿ ಬೇಸಗೆಯದೆ [illegible] [illegible] ವರ್ಣಿತವಾಗಿದೆ ಎಂಬುದು ಈಗಲಾದರೂ ತಿಳಿಯಿತೆ? ಇನ್ನೂ ತಿಳಿದಿಲ್ಲ

ವಾದರೆ ಪರೀಕ್ಷೆಗಳ ಪರಿಣಾಮ (result) ಗಳು ಬೇಸಗೆಯಲ್ಲಿಯೆ ಯಾಕೆ ಹೊರಬೀಳುವುವೆಂದು ಕೇಳಿರಿ.... ಇರಲಿ. ಇನ್ನು ತಾತ್ಪೂರ್ತಿಕವಾಗಿ ಬಿಟ್ಟುಕೊಟ್ಟ 'ಪ್ರಿಯೇ' ಎಂಬ ಶಬ್ದದ ಅರ್ಥವನ್ನು—ಅಲಂಕಾರಿಕ ಅರ್ಥವನ್ನು—ನೋಡೋಣ. 'ಪ್ರಿಯೇ' ಎಂಬುದನ್ನು ಶಾಬ್ದಿಕ ಅರ್ಥದಲ್ಲಿ ಉಪಯೋಗಿಸುವಷ್ಟು ಜಡಬುದ್ಧಿ ಕಾಳಿದಾಸನದೆಂದು ಊಹಿಸುವುದು ಕೂಡ ಪಾಪ. ಸಂಹಾರದ ವರ್ಣನೆಯಲ್ಲಿ ಪ್ರಿಯತಮೆಯನ್ನು ಉದ್ದೇಶಿಸುವುದು ಅನುಚಿತವೆಂದೂ ಹೆಂಗಸಿಗೆ ಯುದ್ಧ-ಸಂಹಾರಗಳಲ್ಲಿ ಸ್ವಾಸ್ಥ್ಯವಿಲ್ಲೆಂದೂ ಮಹಾಕವಿ ಕಾಳಿದಾಸನಿಗೆ ಗೊತ್ತಿರಲಿಕ್ಕಿಲ್ಲವೆ? ಆದುದರಿಂದ 'ಪ್ರಿಯೇ' ಎಂದರೆ 'ಹೆಂಗಸು' ಅಲ್ಲ ಎಂಬುದು ದೃಢವಾದಂತಾಯಿತು. ಹಾಗಾದರೆ ಅದರ ಅರ್ಥವೇನು? ಅನೇಕ ನಾನಾರ್ಥಕೋಶಗಳನ್ನು ನೋಡಿದರೂ ಅರ್ಥ ಹೊಳೆಯಲಿಲ್ಲ. 'ಪ್ರಿಯೇ' ಎಂಬುದು 'ಬಿ. ಎ.' ಯದರ ಸಂಸ್ಕೃತರೂಪವಿರಬಹುದೆಂದು ತಜ್ಞರೊಬ್ಬರು ಅಭಿಪ್ರಾಯಪಟ್ಟಿದ್ದಾರೆ. ಅದಾದರೂ ಸಮಂಜಸವಲ್ಲ ಎಂದು ನನ್ನ ಮತ. ಯಾಕೆಂದರೆ ಬೇಸಗೆಯಲ್ಲಿ ಕೇವಲ ಬಿ. ಎ. ದಲ್ಲಿಯೆ ಸಂಹಾರವಾಗುವುದಿಲ್ಲ, ಇನ್ನೂ ಅನೇಕ ಪರೀಕ್ಷೆಗಳಿವೆ. ಅಥವಾ ಬಿ. ಎ. ಇದು ಮುಖ್ಯ ಧ್ಯೇಯವಿದ್ದುದರಿಂದ ಆ ಶಬ್ದವನ್ನು ಎಲ್ಲ ಪರೀಕ್ಷೆಗಳಿಗೂ ಸಾಂಕೇತಿಕವಾಗಿಟ್ಟುಕೊಂಡಿರಬಾರದೇಕೆ? ಅಥವಾ ಇಂಗ್ಲಿಷಿನಲ್ಲಿ ಹೇಳುವ 'ಸಿನೆಕಾಡೋಕಿ' (synecdoche) ಎಂಬ ಅಲಂಕಾರವಿರಬಾರದೇಕೆ? ಏನೇ ಇರಲಿ, ಬೇಸಗೆಯ ಕಾಲದಿಂದ ಸಂಹಾರಕಾಲವು ಪ್ರಾರಂಭವಾಗುವುದೆಂಬುದಂತೂ ದೃಢವಾದ ಅಭಿಪ್ರಾಯವಾಯಿತು.

ಕವಿಗಳ ಇಂತಹ ಅಗಾಧಜ್ಞಾನವನ್ನು ನೋಡಿ ನಾನು ಎಷ್ಟೋ ಸಲ 'ಆಶ್ಚರ್ಯಗೊಂಬೇಭೂತ'ನಾಗಿದ್ದೇನೆ. ಈ ಸಲ ಮಾತ್ರ 'ವಿಚಾರಮುಂಬೇಭೂತ'ನಾಗಿದ್ದೇನೆ. ಈ ಹುಂಬತನದ ಹರಿಯಲ್ಲಿ ತೇಲಾಡುತ್ತ ಕೊನೆಗೆ 'ಪ್ರಿಯೇ' ಎಂಬುದರ ಅಲಂಕಾರಿಕ ಅರ್ಥಕ್ಕೆ ಮುಟ್ಟಿದೆನೆಂದು ತಿಳಿಸಲು ಸಂತೋಷವಾಗುತ್ತದೆ. ಈ ಅರ್ಥ ಹೊಳೆಯಲು ನನಗೆ ಅಮರಕೋಶದ ಸಹಾಯವಾಯಿತೆಂದು ಮೊದಲೇ ಹೇಳಿಬಿಟ್ಟರೆ ನನ್ನ ವಿಷಯವಾಗಿ ಯಾವ ತರದ ಸಂಶಯವೂ ಉತ್ಪನ್ನ

ವಾಗಲಿಕ್ಕಿಲ್ಲ. 'ಸ್ವರ್ಗ' ಎಂಬುದಕ್ಕೆ ಸಂಸ್ಕೃತದಲ್ಲಿ ಶಬ್ದಗಳೆಷ್ಟು ಎಂದು ಹೇಳುವಾಗ 'ಸ್ತ್ರಿಯಾಂ ಕ್ಲೀಬೇ ತ್ರಿವಿಷ್ಟಪಂ' ಎಂಬುದೊಂದು ಚರಣವಿದೆ ಅಮರಕೋಶದಲ್ಲಿ. ಈ ಚರಣದ ಅರ್ಥವೇನು? ಶಬ್ದಕ್ಕೆ ಸರಿಯಾಗಿ ಹೇಳುವುದಾದರೆ 'ಸ್ತ್ರೀಯಳಲ್ಲೂ ನಪುಂಸಕನಲ್ಲೂ ಸ್ವರ್ಗ' ಎಂದು ನಿಷ್ಪನ್ನವಾಗುವುದು. ಆದರೆ ಈ ಅರ್ಥವು ವ್ಯಾಕರಣದಿಂದ ಸರಿ ಎನಿಸಿದರೂ ವ್ಯವಹಾರದಿಂದ ಸರಿ ಎನಿಸದು. ಗಂಡಸಿಗೂ ಗಂಡುಮಗು ವಿನಿಂದಲೂ ಮಾತ್ರ ಸ್ವರ್ಗ ಎಂದಿದೆ ನಮ್ಮ ವ್ಯವಹಾರ. ಆದುದರಿಂದ ಬೇರೊಂದು ವ್ಯುತ್ಪತ್ತಿಯನ್ನೆ ಹುಡುಕಬೇಕಾಗುವುದು. 'ಸ್ತ್ರಿಯಾಂ' ಎಂದರೆ 'ಸ್ತ್ರೀಲಿಂಗದಲ್ಲಿ', 'ಕ್ಲೀಬೇ' ಎಂದರೆ 'ನಪುಂಸಕಲಿಂಗದಲ್ಲಿ' ಎಂದು ಭಾಷ್ಯಕಾರರು ಹೇಳಿದ ಅರ್ಥ ಸಮಂಜಸ ಎನಬಹುದು. ಎಂದರೆ 'ಸ್ತ್ರೀ' ಎಂಬುದು ವ್ಯಕ್ತಿವಾಚಕವಲ್ಲ, ಲಿಂಗವಾಚಕ ಎಂದಂತಾಯಿತು. ಅದರಂತೆಯೆ 'ಪ್ರಿಯೇ' ಎಂಬುದು ವ್ಯಕ್ತಿವಾಚಕವಲ್ಲದೆ ಬರಿಯ ಲಿಂಗವಾಚಕವೇಕಿರಬಾರದು? 'ನಿದಾಘಕಾಲಃ ಸಮುಪಾಗತಃ' ಎಂಬುದು ಪುಲ್ಲಿಂಗದಲ್ಲಿದೆ. ಈಗ ಇಡಿಯ ಅರ್ಥವನ್ನು ಹೀಗೆ ಹೇಳ ಬಹುದು. 'ಪುಲ್ಲಿಂಗದಲ್ಲಿಯೂ ಸ್ತ್ರೀಲಿಂಗದಲ್ಲಿಯೂ ಸಂಹಾರ (ಆಲಂಕಾರಿಕ) ವಾಗುವುದು'. ಎಂದರೆ ಗಂಡಸರ (ವ್ಯಕ್ತಿಯಲ್ಲ, ಜಾತಿ) ಮತ್ತು ಹೆಂಗಸರ (ಹಿಂದಿನ ಕಂಸ ನೋಡಿರಿ) ಸಂಹಾರವಾಗುವುದೆಂದು ಕವಿಯು ಸೂಚ್ಯವಾಗಿ ಹೇಳಿದ್ದಾನೆ! ಇದಲ್ಲವೆ ಕವಿತ್ವದ ಕೈವಾಡ? ಇದಲ್ಲವೆ ತ್ರಿಕಾಲದರ್ಶನದ ಲಕ್ಷಣ? ಪರೀಕ್ಷೆಯಲ್ಲಿ ಗಂಡಸರಂತೆ ಹೆಂಗಸರೂ 'ಸಂಹಾರ'ಕ್ಕೆ ಸಿಕ್ಕುವುದು ಎಲ್ಲರಿಗೂ ಗೊತ್ತಿದ್ದುದು; ಇದರಲ್ಲೇನು ತ್ರಿಕಾಲದರ್ಶನ, ಎನಬೇಡಿರಿ. ಕಾಳಿದಾಸನ ಕಾಲದಲ್ಲಿ ಹೆಂಗಸರು ಪರೀಕ್ಷೆಗೆ ಕುಳಿತುಕೊಳ್ಳುತ್ತಿದ್ದಿಲ್ಲ; ಇದಲ್ಲದೆ, ಆಗಿನ ಕಾಲದಲ್ಲಿ ಗಂಡಸಿನಲ್ಲಿ ಅವಲಂಬಿಸಿದ ಹೆಂಗಸಿಗೆ ಗಂಡಸನ ಸಂಹಾರ ದೊಡನೆಯೆ ಸಂಹಾರಪ್ರಾಪ್ತವಾಗುತ್ತಿದ್ದಿತು. ('ಜೋಹಾರ'ಎಂಬುದು 'ಸಂಹಾರ'ದ ಒಂದು ಕ್ರಮವಂತೆ!). ಆದುದರಿಂದ ಹೆಂಗಸಿಗೆ ಇನ್ನೊಂದು ತರದ ಸಂಹಾರವಿದ್ದಿತು, ಅದೂ ಬೇಸಗೆಯಲ್ಲಿಯೆ ಇದ್ದಿತು ಎಂದು ಅರ್ಥ ಹಚ್ಚಬೇಕಾಗುವುದು.

ಯಾವುದು ಆ ಸಂಹಾರ? ಬೇಸಗೆಯಲ್ಲಿಯೆ ಯಾಕೆ? ಈ ಪ್ರಶ್ನೆಗಳು ನನಗೆ ಬಹಳ ತೊಡಕಾದುವು. ಕೊನೆಗೊಮ್ಮೆ ತಲೆ ಹಿಡಿದುಕೊಂಡು ದಿಗ್ಭ್ರಾಂತನಂತೆ ಕೋಣೆಯ ಸುತ್ತಲೂ ನೋಡತೊಡಗಿದೆ. ಅಲ್ಲಿ ಕಾಣುವುದೇನು? ಕಾಗದಗಳು 'ಚೆಲ್ಲಾಪಿಲ್ಲಿ'ಯಾಗಿ ಬಿದ್ದಿವೆ. ತೊಡಕು ಬಗೆಹರಿಯುವ ಹಿಡುಕಿನಲ್ಲಿ ಈ ಅವ್ಯವಸ್ಥೆಯಿಂದ ಮತ್ತಿಷ್ಟು ರೇಗಿದೆ. ಕಾಗದಗಳನ್ನೆಲ್ಲ ಚೂರುಚೂರಾಗಿಸಬೇಕೆಂದು ಗುಂಪುಗೂಡಿಸಿದೆ. ಇನ್ನು——ಅಷ್ಟರಲ್ಲಿ ತಟ್ಟನೆ ಹೊಳೆಯಿತು! ನಾನು ಗುಂಪುಗೂಡಿಸುತ್ತಿರುವ ಕಸಕಾಗದಗಳಲ್ಲಿ ರಸ ಹೊರಟಿತು. ನೋಡಿದೆ — ಕೆಲವಷ್ಟು ಕಾಗದಗಳು ಲಗ್ನದ ಆಮಂತ್ರಣಪತ್ರಿಕೆಗಳು!

ಇ-ರ-ಬ-ಹು-ದೆ?—ಎಂದುಕೊಂಡೆ ಮೆಲ್ಲಗೆ. ಮದುವೆ! ಬೇಸಗೆಯಲ್ಲಿಯೆ ಮದುವೆಯ ಮುಹೂರ್ತಗಳು! ಬೇಸಗೆಯಲ್ಲಿಯೆ — ಅಥವಾ ಸಂಶಯವೇಕೆ? 'ಮದುವೆ' ಎಂಬುದು ಕಾಳಿದಾಸನ ದೃಷ್ಟಿಯಿಂದ ಹೆಂಗಸರಿಗೆ 'ಸಂಹಾರ'ವಿದ್ದಂತೆಯೆ ಎಂಬುದು ಖಂಡಿತ. ಇದಾಯಿತು- ಆದರೆ ಗಂಡಸರದೂ ಸಂಹಾರ ಎಂದಿದೆಯಲ್ಲ ನಿಮ್ಮ ಅರ್ಥದಲ್ಲಿ? ಮದುವೆ ಗಂಡಸರಿಗೆ 'ಸಂಹಾರ' ಹೇಗೆ-ಎಂದು ಯಾರಾದರೂ ಕೇಳಿದರೆ ಮದುವೆ ಆತ್ಮಪರೀಕ್ಷೆಯಲ್ಲ, ಅಪ್ಪಂದಿರ ಪರೀಕ್ಷೆ—ಅರ್ಥಾತ್ ಅಪ್ಪಂದಿರ—ಸಾಕಿನ್ನು ಕಪಿತ್ವದ ಕಿಡಿಗೇಡಿತನ........

(೧೯—೬—೧೯೩೭)

---

೨. ಋತುಸಂಹಾರ

(ಎರಡನೆಯ ಭೀಕರ ಸೃಷ್ಟಿ)

'ನನಗೆ ಮುಂಬೈಗೆ ಹೋಗಬೇಕಾಗಿದೆ, ಹೇಗೆ ಹೋಗಬೇಕು?' ಎಂದು ಮಿತ್ರರೊಬ್ಬರು ನನ್ನನ್ನು ಕೇಳಿದರು. ಸಾವಿರ ಸಲ ಮುಂಬಯಿಗೆ ಹೋಗಿಬರುವ ಈ ಸದ್ಗೃಹಸ್ಥ ಹೀಗೇಕೆ ಕೇಳುವನು ಎಂದು ನನಗೆ ಆಶ್ಚರ್ಯವಾಯಿತು. ನನ್ನನ್ನು ಕೆಣಕುವ ಇಚ್ಛೆ ಇದ್ದರೂ ಇರಬಹುದೆಂದು ಬಗೆದು ನಾನಾಗಿಯೆ ಮಂಗ-ಮಾತನ್ನು ಪ್ರಾರಂಭಿಸಿದೆ. 'ಧಾರವಾಡ-ಗುಂತಕಲ್-ಬೆಝವಾಡಾ ಮಾರ್ಗದಿಂದ ವಾಲ್ಟೇರದ ಮೇಲೆ ಹಾಯ್ದು ಹಾಗೇ ಮದ್ರಾಸ-ಬೆಂಗಳೂರ-ಲೋಂಡಾದ ಗುಂಟ ಪುಣೆಯನ್ನು ಮುಟ್ಟಿ ಆಮೇಲೆ ಮುಂಬೈಗೆ ಹೋಗಬೇಕು' ಎಂದೆ. ಮಿತ್ರರು ನಕ್ಕು ತಮ್ಮ ಕೈಯಲ್ಲಿಯ ಸ್ವೇಚ್ಛಾ ಸಂಚಾರ (Travel-as-you-like) ಟಿಕೆಟ್ಟನ್ನು ತೋರಿಸಿದರು. ನನಗೆ ಇದು ಗೊತ್ತು. ಯಾಕೆಂದರೆ ನೇರವಾಗಿ ಧಾರವಾಡದಿಂದ ಪುಣೆಗೆ ಹೋಗಿ ಬರುವುದಕ್ಕಿಂತ ಸ್ವೇಚ್ಛಾ ಸಂಚಾರದಿಂದ ಸುತ್ತಾಡಿ ಹೋದರೆ ಹತ್ತು-ಹನ್ನೆರಡಾಣೆಗಳ ಉಳಿತಾಯವಾಗುವುದೆಂದೂ ನನಗೆ ಗೊತ್ತು.

ನಿಜವಾಗಿ ಹೇಳುವುದಾದರೆ ಈ ವಿಷಯ ನನ್ನ ಅನುಭವ ದೊಡ್ಡದಿದೆ, ಜ್ಞಾನ ಅಪಾರವಿದೆ. ಅರೇಬಿಯನ್ ನಾಯಿಟ್ಸ್ ಕತೆಯೊಳಗಿನ Carpet (ಜಮಖಾನಾ)ದಂತೆ ಬೇಕಾದಲ್ಲಿ ನಮ್ಮನ್ನು ಒಯ್ದು ಮುಟ್ಟಿಸುವ ಸ್ವೇಚ್ಛಾ ಸಂಚಾರದ ಟಿಕೆಟ್ಟುಗಳನ್ನು ನಾನು ಕಂಡಿದ್ದೇನೆ,

ಕೊಂಡಿದ್ದೇನೆ. ನಾನು ಲೇಖಕನಲ್ಲವೆ? ಜನರ ಇಚ್ಛಾಸಿದ್ಧಿಗಳನ್ನು ತಿಳಿದುಕೊಳ್ಳಬೇಕಲ್ಲವೆ? ಜನರು ಸತ್ತ್ವಪರರಾಗಿದ್ದರೆ ಕಾಕಪಿಚ್ಛದಿಂದ ತಿಳಿದುಕೊಳ್ಳಬಹುದಾಗಿತ್ತು. ಆದರೆ ಇದ್ದವರ ಇಂಗಿತಗಳನ್ನು ತಿಳಿದುಕೊಳ್ಳಲು ಸಾಧನವೆಲ್ಲಿದೆ? ಅರ್ಥಾತ್, ಸ್ವೇಚ್ಛಾ ಸಂಚಾರದ ಟಿಕೆಟ್ಟಿನಲ್ಲಿ. ಹೀಗೆ ಅವರ ಟಿಕೆಟ್ಟುಗಳಿಂದ ಅವರ ಇಚ್ಛೆಯನ್ನು ತಿಳಿದುಕೊಳ್ಳಬೇಕೆಂಬ ಲವಲವಿಕೆಯಿಂದ ನಾನೂ ಅಂತಹದೊಂದು ಟಿಕೆಟ್ಟನ್ನು ಕೊಂಡುಕೊಂಡೆ. ಆದರೆ ಮೊದಲನೆಯ ಹೆಜ್ಜೆಗೆಯೆ ನನ್ನ ಕುತೂಹಲ ತಗ್ಗಿತು; ಯಾಕೆಂದರೆ ನನಗೆ ಎರಡನೆಯ ಹೆಜ್ಜೆಯನ್ನೆ ಇಡಗೊಡಬಾರದೆಂದು ಆ ಜನರ ಇಚ್ಛೆ ಇದ್ದುದು ಕಂಡುಬಂದಿತು.

'ಏನು, ಸರ್, ಟಿಕೆಟ್ ಕೊಟ್ಟಿರಿ, ಒಳಗೆ ಸ್ಥಳವಿಲ್ಲವಲ್ಲ! ಏನು ಹೇಳುವಿರಿ?' ಎಂದು ಸ್ಟೇಶನ್ ಮಾಸ್ಟರರನ್ನು ಕೇಳಿದೆ.

'ನನಗೇನು ಕೇಳುವಿರಿ, ಸರ್? ಆ ಟಿಕೆಟ್ಟನ್ನು ಕೊಂಡಿರುವಿರಿ. ತಮ್ಮ ಇಚ್ಛೆಗೆ ಬಂದಂತೆ ಮಾಡಬಹುದು' ಎಂದನು ಆ ಎಸ್. ಎಮ್.! (S. M. ಅಂದರೆ Station Master; M. S. M. ಅಂದರೆ Master of Station Masters ಎಂದು ಸಂಕೇತವಂತೆ).

ಅದೂ ಹೋಗಲಿ. ಕಂಪಾರ್ಟ್‌ಮೆಂಟಿನೊಳಗೆ ಒಂದು ಕಾಲು ಸಿಕ್ಕುಬಿದ್ದಿದೆ, ಅದನ್ನು ಹೊರಗೆಳೆಯಬೇಕೆಂದು ಇಚ್ಛಿಸಿದೆ— ಆದರೆ ಸಾಧ್ಯವಾಗಲಿಲ್ಲ. ಇಷ್ಟರಲ್ಲಿ ಗಂಟೆ!—ಸೀಟಿ!—ನಿಶಾನೆ! ನಡೆಯಿತು ಟ್ರೇನು!! ಒಂದು ಕಾಲು ಸ್ವಂತದ ಆಶೆಯಿಂದ ಸಂಸಾರದಲ್ಲಿ, ಇನ್ನೊಂದು ಕಾಲು ಸ್ವರ್ಗದ ಆಶೆಯಿಂದ ಸ್ಮಶಾನದಲ್ಲಿ—ಹೀಗೆ ಜೀವಕ್ಕೆ ಜೋತುಬಿದ್ದ ಹಿಂದೂಧರ್ಮದ ದ್ಯೋತಕದಂತೆ ನಾನು ಕುಂಟುತ್ತ, ತೂಗುತ್ತ ಎಳೆಯಲ್ಪಟ್ಟೆ. ಕೊನೆಗೆ ಒಳಗಿನವರು ಯಾರೋ ನನ್ನನ್ನು ನೂಕಬೇಕೆನುವಾಗ ಅವನ ಕೈಯನ್ನೆ ಗಟ್ಟಿಯಾಗಿ ಹಿಡಿದೆ. ಇಷ್ಟರಲ್ಲಿ ಟ್ರೇನು ಕೊಂಕುದಾರಿಗೆ ಸೇರಿ ಜೋಲಿ ಹೊಡೆಯಲು ಕೈಹಿಡಿದವನ ಜೋಲಿಯ ಜೋರಿಗೆ ನಾನು ಒಳಗೇ ಸಿಡಿದುಬಿದ್ದೆ! ಇಷ್ಟೇ ಅಲ್ಲ, ಆ ಪ್ರಾಣಿಯು ನನ್ನನ್ನು ನೂಕುವುದಕ್ಕಾಗಿ ನಿಂತಿದ್ದನಲ್ಲವೆ? ಆ

ಖಾಲಿಯಾದ ಜಾಗೆಯಲ್ಲಿಯೆ ನಾನು ಅಪ್ಪಳಿಸಿ ಕುಕ್ಕರಿಸಿದೆ! ಅಂತೂ ಕೊನೆಗೊಮ್ಮೆ ಜಾಗೆ ಸಿಕ್ಕಿತು........

ಆ ಜಾಗೆಯಲ್ಲಿ ಕುಳಿತುಕೊಂಡೇ ಎಷ್ಟು ದಿವಸಗಳನ್ನು ಕಳೆದೆನೊ! ಈಗ ಹೇಳಲು ಸಾಧ್ಯವಿಲ್ಲ. ಹಗಲು-ರಾತ್ರಿ–ಹಗಲು-ರಾತ್ರಿ–ದೂಳು-ಹೊಗೆ–ಹೊಗೆ-ದೂಳು–ಮುಂಜಾವು-ಮಧ್ಯಾಹ್ನ-ಸಂಜೆ–ಮತ್ತೆ—ಹೀಗೆ ಒಂದೇ ಸಮನೆ ದಿವಸಗಳು ಜಾರುತ್ತಲಿದ್ದುವು. ನಾನು ಮಾತ್ರ ಕುಳಿತಲ್ಲಿಯೇ ಕುಳಿತುಬಿಟ್ಟೆ! ಈಗ ಟ್ರೇನು ನಿಂತಿದ್ದ ಸ್ಟೇಶನ್ ಯಾವುದು? ಆ ಜನ ಸಮೂಹದ ಸಂದಣಿಯಿಂದ ಕಾಣುವುದೂ ಶಕ್ಯವಿಲ್ಲ. ತುಸು ಎದ್ದು ನಿಂತು ನೋಡಬೇಕೆಂದರೆ ಇನ್ನೊಬ್ಬರು ನನ್ನ ಜಾಗೆಯಲ್ಲಿ ಕುಳಿತು ಕೊಂಡಾರಲ್ಲ—ಎಂಬ ಹೆದರಿಕೆ. ಆಗಾಗ ಒಬ್ಬಿಬ್ಬರು 'ಜಸಿಪೇಟ್' 'ಗಾಳಿಪೇಟ್' ಎಂದು ತಡವರಿಸಿ ಎದ್ದು ಬಾಗಿಲವರೆಗೆ ಹೋದುದನ್ನೂ ಅಷ್ಟರಲ್ಲಿ ಟ್ರೇನು ಸಾಗಿದುದನ್ನೂ ಇತ್ತ ತಮ್ಮ ಸ್ಟೇಶನವೂ ಇಲ್ಲ—ಇತ್ತ ಜಾಗೆಯೂ ಇಲ್ಲ ಎನುತ್ತ ಎದ್ದವರು ಗುದ್ದಾಡುವುದನ್ನೂ ಕಣ್ಣಾರೆ ನೋಡಿ ನಾನು ಆ ಹವ್ಯಾಸಕ್ಕೆ ಬೀಳಲೇ ಇಲ್ಲ. ನನ್ನ ಮನಸಿನಲ್ಲಿ ಒಂದೇ ಧೈರ್ಯ. ಬೇಕಾದಷ್ಟು ದಿನಗಳು ಕಳೆಯಲಿ, ಹದಿನೈದು ದಿನಗಳಾದುವೆಂದರೆ ರೇಲ್ವೆ ಸರಕಾರದವರು ನನ್ನನ್ನು ಇಳಿಸಿಕೊಳ್ಳಲಿಕ್ಕೆ ತಾವಾಗಿಯೆ ಬರುವರೆಂಬ ಧೈರ್ಯ. ಯಾಕೆಂದರೆ ನಮ್ಮ 'ಟಿಕೇಟ್ಟುಗಳ ವಾಯಿದೆಯು ಹದಿನೈದು ದಿನಗಳು ಮಾತ್ರ'; ಹೀಗಾಗಿ ಕುಳಿತೇಬಿಟ್ಟೆ.... ಕೊನೆಗೊಮ್ಮೆ ಪಿಳಿಪಿಳಿ ಕಣ್ಣುಬಿಟ್ಟೆ—ನಾನು ಕುಳಿತದ್ದು ಎಲ್ಲಿ ಎಂಬ ಸಂಶಯಬಂದ. ಮದುವೆಯ ಮನೆಯಲ್ಲಿಯೆ? ಪುಕ್ಕಟೆ ಪ್ರವೇಶವಿದ್ದ ನಾಟಕ-ಸಿನೆಮಾ ಥಿಯೇಟರಿನಲ್ಲಿಯೆ? ಏನಿದು ಜನಸಂಮರ್ದ! ನಾನು ಹೇಳಿದರೆ ನೀವು ನಂಬುವುದಿಲ್ಲ, ಅತಿಶಯೋಕ್ತಿ ಎನುವಿರಿ. ಎಷ್ಟೋ ಸಲ ಟ್ರೇನಿನ ಹೊಯ್ದಾಟಕ್ಕೆ ನನ್ನ ಬದಿಗೆ ಕುಳಿತವನು ತನ್ನ ಕೈಯೊಳಗಿನ ಸಿಗರೇಟನ್ನು ನನ್ನ ಬಾಯಿಯೊಳಗಿಟ್ಟನು—ತನ್ನ ಬಾಯಿ ಎಂದೇ ತಿಳಿದು! ಅಷ್ಟೊಂದು ಜನಸಂದಣಿ! ನಾನು ಹೇಳಿದರೆ ನೀವು ನಂಬುವುದಿಲ್ಲ. ಅತಿಶಯೋಕ್ತಿ ಎನುವಿರಿ. ಆ ಸಂದಣಿಯಲ್ಲಿ ಮೈಗೆ ಮೈ ತಿಕ್ಕಿ, ಆ ಸಂಮರ್ದದಿಂದ, ಆ ಸಂಘರ್ಷಣದಿಂದ ನನ್ನ ಕಿಸೆಯೊಳಗಿನ ನಾಲ್ಕಾಣೆಯು

ದೊಂದು ನಾಣ್ಯವು ಚಪ್ಪಟೆಯಾಗಿ ರುಪಾಯಿಯಷ್ಟು ದೊಡ್ಡದಾಗಿತ್ತು! 'ಪುರೀಭಾಜೀ' ಮಾರವಾಡಿಯು ಅದನ್ನು ರುಪಾಯಿ ಎಂದೇ ಸ್ವೀಕರಿಸಿದ ನೆಂದು ಹೇಳಿದ ಮೇಲಾದರೂ ನಿಮಗೆ ವಿಶ್ವಾಸವಾದೀತಲ್ಲವೆ ನನ್ನ ಮಾತಿನಲ್ಲಿ? ಇಂತಹ ಜನಸಂದಣಿ! ಹೆಚ್ಚಿಗೆ ಹೇಳುವುದೇನು? ಐದು ಫೂಟು ಎತ್ತರ ಮೂರು ಫೂಟು ಅಗಲ ಇದ್ದ ನನ್ನ ಗೆಳೆಯನೊಬ್ಬನು ನುತ್ತುಮುತ್ತಲಿನ ಸತತ ಸಂಘರ್ಷಣದಿಂದ ಹದಿನೈದು ದಿವಸಗಳಲ್ಲಿ ಟ್ರೇನಿನಿಂದ ಇಳಿಯುವಾಗ ೬|| ಫೂಟು ಎತ್ತರ ೧|| ಫೂಟು ಅಗಲನಾಗಿದ್ದ ನೆಂದು ಹೇಳಿದರೆ ಅತಿಶಯೋಕ್ತಿ ಎನಿಸಲಿಕ್ಕಿಲ್ಲವಷ್ಟೆ?

ಮೂವತ್ತು ಜನ ಕೂಡಬೇಕಾದ ಜಾಗೆಯಲ್ಲಿ ನೂರಾಮೂವತ್ತು ಜನ ಕುಳಿತಿದ್ದೇವೆ! ಅದು ಹೇಗೆ—ಎಂದರೆ ಹೀಗೆ:—ಎಲ್ಲರೂ ಒಂದೇ ವೇಳೆಗೆ ಕುಳಿತಿರಲಿಲ್ಲ. ನನ್ನ ಬದಿಯವನು ತುಸು ಮುಂದೆ ಬಾಗಿದನೆಂದರೆ ನಾನು ಅಷ್ಟೇ ತುಸು ಹಿಂದೆ ಸರಿದು ಕುಳಿತುಕೊಳ್ಳುತ್ತಿದ್ದೆ. ನನ್ನ ಮುಂದೆ ಕುಳಿತವನು ಬಲಗಾಲನ್ನು ಎಡಗಾಲ (ಎರಡೂ ಅವನವು) ಮೇಲಿಟ್ಟರೆ ನಾನು ನನ್ನ ಎಡಗಾಲನ್ನು ಬಲಗಾಲ ಮೇಲಿಡುತ್ತಿದ್ದೆ. ಬದಿಯವರಿಬ್ಬರೂ ಒಂದೇ ವೇಳೆಗೆ ಕೂಡ್ರುವಂತಿಲ್ಲ. ಇದಿರಾಗಿದ್ದವರು ಒಂದೇ ವೇಳೆಗೆ ಎರಡೂ ಕಾಲ್ಗಳನ್ನು ಕೆಳಗಿಡುವಂತಿಲ್ಲ. ೩೦ ಜನ ಇರಬೇಕಾದ ಜಾಗೆಯಲ್ಲಿ ೧೩೦ ಜನ! ಉಸಿರಾಡಿಸುವ ಹವೆಯು ಧಾರಣೆ ಏರಿತು. ಬೆವರು ಇಳಿಯಿತು, ಬಾಯಿ ಬತ್ತಿತು, ಜೀವವು ಕುತ್ತಿನಲ್ಲಿ ಸಿಕ್ಕಂತಾಯಿತು. ಇಷ್ಟರಲ್ಲಿ ನನ್ನ ಬದಿಯವನು ಬಾಯ್ದೆರೆದನು, ತುಟಿ ಬಡೆಯತೊಡಗಿದನು, ಹಣೆಯ ಮೇಲೆ ನರಗಳೆದ್ದುವು—ಎಂ. ಎಸ್. ಎಂ.ದ ಟಿಕೆಟ್ಟಿನ ಬದಲಾಗಿ ಯಮಸದನದ ಟಿಕೆಟ್ಟನ್ನು ಕೊಂಡಿರುವೆನೇನೊ ಎಂದು ಹೆದರಿಕೆಯಾಯಿತು ನನಗೆ. ಇಷ್ಟರಲ್ಲಿ ಗಾಡಿಯು ವೇಗ ಕಡಮೆ ಯಾಯಿತು. ಅಯ್ಯೋ!—ನಾನು ಸುಮ್ಮನೆ ಹೆದರಿದ್ದೆ. 'ನೀವು ಎಲ್ಲಿ ಹೋಗುವವರು?' ಎಂದು ನನ್ನನ್ನೆ ಕೂಗಿ ಕಿರಚಿ ಕೇಳುತ್ತಿದ್ದ ನನ್ನ ಬದಿಯವ, ಮತ್ತೇನೂ ಅಲ್ಲ ಎಂದು ಆಗ ನನಗೆ ತಿಳಿದು ಬಂದಿತು! ಅಂತೂ ಕೊನೆಗೆ ಇಬ್ಬರೂ 'ದೇವದತ್ತ-ಪಾಂಚಜನ್ಯ' ಸ್ವರಗಳಲ್ಲಿ ಮಾತನಾಡತೊಡಗಿದೆವು. ಮಾತಿನ ಭರದಲ್ಲಿ ನಾನು ಹೇಳಿದೆ,

'ಇಂಗ್ಲಂಡಿನಲ್ಲಿದ್ದರೆ ಹೀಗೆ ಜನರನ್ನು ಕುರಿಗಳಂತೆ ತುಂಬುತ್ತಿರಲಿಲ್ಲ. ಎರಡನೆಯ ಟ್ರೇನನ್ನು ಹೊರಡಿಸುತ್ತಿದ್ದರು.'

'ಇಂಗ್ಲಂಡಿಗೆ ಹೋಗಿ ಬಂದವರಿದ್ದರೆ ಫರ್ಡಕ್ಲಾಸಿನಲ್ಲಿ ಯಾಕೆ ಹೊರಟಿರಿ?' ಎಂದ ನನ್ನ ಬದಿಯವ!

ಗಾಡಿಯ ವೇಗ ಹೆಚ್ಚಾದ್ದರಿಂದ ನಾನು ಧೈರ್ಯದಿಂದ ಮನಬಂದಂತೆ ಅವನನ್ನು ಬೈದುಕೊಂಡೆ. 'ಕೇಳಿಸುವುದಿಲ್ಲ' ಎಂದು ಸನ್ನೆಯಿಂದ ತಿಳುಹಿಸಿದನು ನನ್ನ ಬದಿಯವ. 'ನಿನ್ನ ತಲೆ!' ಎಂದೆ—ಅವನಿಗೆ ಕಾಣಿಸುವಂತೆ ನಕ್ಕುಬಿಟ್ಟೆ.

As you like! ಈ ಜನರಿಗೆ ಇದೇ ಸೇರುವುದೆ ಎಂದು ನನಗೆ ದಿಗಿಲು ಬಿದ್ದಿತು. ಒಮ್ಮೆಲೆ ಗಾಡಿ ನಿಂತಿತು. ಕೂಸೊಂದು ಚಿರ್ ಎಂದು ಚೀರುತ್ತಲಿದೆ. ತಾಯಿಯು ಹತಾಶಳಾಗಿ ಕೂತುಕೊಂಡಿದ್ದಾಳೆ. ಕೂಸು ಒಂದೇಸಮನೆ ಹುಲುಬುತ್ತಿದೆ. ಆ ಹೆಣ್ಮಗಳ ಬದಿಗಿದ್ದವನಿಗೆ ಅದೇನು ಸ್ಫೂರ್ತಿ ಬಂದಿತೊ! ಒಮ್ಮೆಲೆ ಎತ್ತಿದನು ಆ ಕೂಸನ್ನು. ತನ್ನ ಮುಂದಿದ್ದವನ ಕೈಯಲ್ಲಿಟ್ಟು 'ಬಾಗಿಲಿಗೆ ಮುಟ್ಟಿಸಿರಿ' ಎಂದನು. ತಲೆಯಿಂದ ತಲೆಗೆ ಇಳಿದುಬರುವ ಪಾಪದಂತೆ ಕೈಯಿಂದ ಕೈಗೆ 'ಬಾಗಿಲು, ಬಾಗಿಲು' ಎಂಬ ದನಿಗುಂಟ ಕೂಸು ಬಾಗಿಲ ಹತ್ತಿರದಲ್ಲಿ ನಿಂತವನ ಕೈಗೆ ಬಂದು ಮುಟ್ಟಿತು. ಅವನು ಯಾವ ವಿಚಾರದಲ್ಲಿದ್ದನೊ! ಕೂಸನ್ನು ಬಾಗಿಲಿನಿಂದ ಹೊರಕ್ಕೆ ಎತ್ತಿ ಹಿಡಿದ. ತಾಯಿ ಚೀರಿದಳು. ಅವಳ ಬದಿಯಲ್ಲಿದ್ದವನು 'ಹೊರಗಲ್ಲ, ಆ ಬಾಗಿಲು, ಆ' ಎಂದು ಕೂಗಿ ಕೈಸನ್ನೆಯಿಂದ ತಿಳುಹಿಸಿದನು. 'ಆ' ಬಾಗಿಲಿಗೆ ಕೂಸನ್ನು ಮುಟ್ಟಿಸಿತು, ಹೆಣ್ಮಗಳು ಇದುವರೆಗೆ ಯಾಕೆ ಸುಮ್ಮನಿದ್ದಳೆಂಬುದು ಆಗ ತಿಳಿಯಿತು.

As you like! ಬೇಸಗೆಯ ಬಿಸಿಲು! ಕೆಳಗೆ ಕಾದ ಹಂಚಿನಂತಿದ್ದ ಟ್ರೇನು! ಎರಡೂ ಬದಿಗೆ ತುಂಬಿಕೊಂಡು ಕುಳಿತು ಕಿಟಿಕಿಗೆ ತುರುಕಿದ ಹರಕು ಚಿಂದೆಗಳ ಗಡ್ಡೆಗಳಂತಹ ನಿಬಿಡ ಜನಸಂದಣಿ! ನಡುವೆ ವಾಮನಾವತಾರದಂತೆ ಒಂದು ಕಾಲು ನೆಲದ ಮೇಲೆ ಒಂದು ಕಾಲು ಆಕಾಶದಲ್ಲಿಟ್ಟುಕೊಂಡು ಹೊಯ್ದಾಡುವ ದೇಹಗಳ ಸಮೂಹ!

ಕಿಸೆಯಲ್ಲಿಯ ಕಲ್ಪತರುವಿನಂತಹ ಟಿಕೆಟ್ಟನ್ನು ನೋಡೋಣ ಒಮ್ಮೆ ಎಂದು ಒಳಕಿಸೆಯಲ್ಲಿ ಕೈಹಾಕಿದೆ—ಟಿಕೆಟ್ಟು ಇಲ್ಲವೇ ಇಲ್ಲ! 'ಅಯ್ಯೋ' ಎಂದು ಎದೆ ಬಡೆದುಕೊಳ್ಳುವಷ್ಟರಲ್ಲಿ ಎದೆಯ ಬದಲು ಟಿಕೆಟ್ಟೇ ಕೈಗೆ ತಾಕಿತು! ಮತ್ತೊಮ್ಮೆ ಕಿಸೆಯಲ್ಲಿ ಕೈಹಾಕಿದೆ—ಬೆವರಿನಿಂದ ಟಿಕೆಟ್ಟು ಕಿಸೆಗೆ ಅಂಟಿಕೊಂಡೇ ಬಿಟ್ಟಿದೆ! ಬೇಸಗೆಯ ದಿನ! ವೈಶಾಖಮಾಸದ ದಿನ! ವಸಂತಋತುವಿನ ದಿನ! ಕವಿಗಳ ವಸಂತಋತು! ಕಾಮಸಂಚಾರದ ಋತು! ಕಾಮಸಂಚಾರವೆಂದು ಕವಿಗಳು ಹೇಳಿದುದರ ಅರ್ಥವು travel as you like ಎಂದೊ? ಪ್ರತಿಯೊಂದು ವಸಂತಋತುವಿಗೂ ಈ ಕಾಮ ಸಂಚಾರವನ್ನು ಭೋಗಿಸಬೇಕೆ ನಾವು? ನನ್ನ ಮೈ ನಡುಗಿತು. ಪ್ರತಿಯೊಂದು ಬೇಸಗೆಯಲ್ಲಿ ಮುಂಬಯಿಯ ಜನರಾಡುವ ಹಿಂದು-ಮುಸಲ್ಮಾನ ದಂಗೆ (ದೊಂಬಿ) ಗಳಲ್ಲಿ ಸೇರಿಕೊಳ್ಳುವುದು ಇದಕ್ಕಿಂತ ಸುಖಕರವಾಗಲಿಕ್ಕಿಲ್ಲವೆ—ಎನಿಸಿತು. ಆದರೆ ಹೇಳುವುದು ಹೇಗೆ? ಪ್ರತಿವರುಷ ದಂಗೆಗಳು ಜರುಗುವುದರಿಂದ ಅವುಗಳ ದರ್ಶನಕ್ಕಾಗಿ ಆ ರೇಲ್ವೆದವರೂ ಕನ್ಸೆಶನ್ ಟಿಕೆಟ್ಟುಗಳನ್ನಿಟ್ಟರೆ? ಅಂತೂ ಈ ವಸಂತ ಋತುವಿನಲ್ಲಿಯ ಸಂಹಾರವು ನನಗೆ ತಪ್ಪುವಂತಿಲ್ಲವೆ, ದೇವಾ? ಎಂದು ಮೊರೆ ಇಡುವುದಕ್ಕಾಗಿ ಎರಡೂ ಕೈಗಳನ್ನು ಮೇಲಕ್ಕೆತ್ತಿದೆ.

ತಟ್ಟನೆ ಅನುವು ದೊರೆತು ನನ್ನ ಎಡಬಲದಲ್ಲಿದ್ದವರು ಒಂದೇ ಶಿಸ್ತಿನಿಂದ ಹಿಂದೆ ಸರಿದು, 'ಪ್ರಶಸ್ತ'ವಾಗಿ ಆತು ಕುಳಿತರು!

(೨೫-೬-೧೯೩೭)

೩. ಋತುಸಂಹಾರ

ಅರ್ಥಾತ್

ನಗರಸಭೆಯ ಮಳೆಗಾಲ

ವರ್ಷಾಋತುವಿನ ಸಮಯ! ತಾತ್ಪರ್ಯವೇನೆಂದರೆ ಮಳೆಗಾಲದ ಚಿಹ್ನೆಗಳು ತೋರಿಬರುವುವೆಂದು ಪಂಚಾಂಗದಲ್ಲಿ ಬರೆದಿದೆ. ಪಂಚಾಂಗ ವೆಂದರೆ ಪುರಾಣದ ಗೊಡ್ಡು ಎಂದು ಮೂಗು ಮುರಿಯುವಂತಿಲ್ಲ. ಪರಕೀಯ ಸಂಸ್ಕೃತಿಪುಷ್ಟರಾದ 'ಪೋರಪಂಡಿತ'ರಿಗೆ ಮಾನ್ಯವೆನಿಸ ಬಹುದಾದ ಟಾಯಿಮ್ಸ್ ಆಫ್ ಇಂಡಿಯಾ ಪತ್ರಿಕೆಯಲ್ಲೂ ಅದೇ ಸಂಗತಿ ಯನ್ನೆ ಕಾಣಿಸಿದೆ. ನನಗೆ ಮಾತ್ರ ಕಲಿಯುಗದಲ್ಲೂ ವಿಶ್ವಾಸವಿರಲಿಲ್ಲ, ಆದುದರಿಂದ ಪಂಚಾಂಗವನ್ನು ನೋಡುತ್ತಿರಲಿಲ್ಲ. ಅದರಂತೆ 'ಮನ್ಸೂನ' (monsoon) ಮಹಾಶಯನು ತಾನು ಕೊಲಂಬೊ ನಗರವನ್ನು ಸುಖರೂಪವಾಗಿ ಮುಟ್ಟಿದ ಕ್ಷೇಮಸಮಾಚಾರದ ಪತ್ರವನ್ನು ನೋಡಿದರೂ ನಂಬುತ್ತಿರಲಿಲ್ಲ. ಹೀಗಿರುವಾಗ

ಒಂದು ದಿವಸದ ಪ್ರಾತಃಕಾಲದ ಸಮಯ. ಯಥಾವಕಾಶವಾಗಿ ಎದ್ದು ಬಾಗಿಲಲ್ಲಿ ನೋಡುತ್ತ—ನೋಡುವುದೇನು? ಎತ್ತ ನೋಡಿದತ್ತ ಮುಸುಕು! ಸೂರ್ಯನೂ ಕಾಣಲೊಲ್ಲನು! ನನಗೆ ಆಶ್ಚರ್ಯವಾಯಿತು. ಪ್ರಾತಃಕಾಲವಾದರೂ ಆಗಿರಲಿಕ್ಕಿಲ್ಲ, ಇಲ್ಲವೆ— ಇಲ್ಲವೆ—? ತಟ್ಟನೆ ಹೊಳೆಯಿತು ಸೂರ್ಯಗ್ರಹಣದ ಸಮಯವಿರಬಹುದೆಂದು. ಸೂರ್ಯನಿ ಗಿಂತ ಸೂರ್ಯಗ್ರಹಣದ ವಾತಾವರಣವೆ ನನ್ನ ಅನುಗಿಮನೆ

ಹೆಂಗಸರಿಗೆ ಹೆಚ್ಚು ಪರಿಚಿತವಿರುವುದರಿಂದ 'ಅವರನ್ನು' ಕೇಳೋಣ ಎಂದು ಒಳಗೆ ಹೋದೆ. ಅಲ್ಲಿ ಇನ್ನೂ ಒಂದು ಆಶ್ಚರ್ಯ! ನಳದಿಂದ ನೀರು ಸುರಿಯುತ್ತಲಿದೆ!

ನಳದಿಂದ ನೀರು ಸುರಿಯುವುದರಲ್ಲಿ ಆಶ್ಚರ್ಯವೇನು ಎಂದು ಎಷ್ಟೋ ಜನರು ಕೇಳಬಹುದು. ಆದರೆ ನಮ್ಮೂರ ನಳದ ಪರಿಚಯವೇ ಯಾರಿಗಿರಲಿಕ್ಕಿಲ್ಲ. ನಮ್ಮೂರ ನಳವೆಂದರೆ ಪೌರಾಣಿಕ ನಳನಂತೆ; ಅವಕ್ಕೆ ಕಲಿಯ ಕಾಟ ತಪ್ಪಿಲ್ಲ. ಈಗಿನ ನಗರಸುಧಾರಣಾಕಾಲದಲ್ಲಿ ನಗರದ ಹೊಲಸ ನೀರನ್ನು ಹೊರಗೆ ಬಿಡುವ ವ್ಯವಸ್ಥೆ ಇದೆಯಂತೆ. ಆದರೆ ಕಲಿಯ ಮಾಹಾತ್ಮ್ಯದಿಂದ ನಮ್ಮೂರ ನಳದ ಕತೆ ವಿಪರೀತವಾಗಿದೆ. ಹೊರಗಿನ ಹೊಲಸ ನೀರೇ ನಳದ ಮಾರ್ಗವಾಗಿ ಮನೆಮನೆ ಹಂಚಲ್ಪಡುತ್ತಿದೆ ನಮ್ಮಲ್ಲಿ! ಸಾಮಾನ್ಯವಾಗಿ ಗ್ರಹಣಾದಿ ಪರ್ವಕಾಲ ದಲ್ಲಿಯೆ ನಳಕ್ಕೆ ನೀರಿನ ವ್ಯವಸ್ಥೆಯನ್ನು ಮಾಡಲಾಗುವುದು. ಯಾಕೆಂದರೆ ನೆಟ್ಟ ಮುಳ್ಳನ್ನು ಮುಳ್ಳಿನಿಂದಲೆ ತೆಗೆವಂತೆ ಗ್ರಹಣಕಾಲದ ಮೈಲಿಗೆಯ ಮಾಲಿನ್ಯವನ್ನು ಹೊಲಸ ನೀರಿನಿಂದಲೆ ತೊಳೆಯಬೇಕಾಗುವುದು. ಹೀಗಾಗಿ ನಳದಿಂದ ನೀರು ಸುರಿಯುವುದನ್ನು ನೋಡಿ ಸೂರ್ಯಗ್ರಹಣ ವಿರಬಹುದೆಂಬ ನನ್ನ ಮೊದಲ ಕಲ್ಪನೆಯೆ ದೃಢವಾಯಿತು. ಉಬ್ಬಿನಿಂದ ನನ್ನ ಕಲ್ಪನಾಶಕ್ತಿಯ ಈ ದೃಷ್ಟಾಂತವನ್ನು 'ಅವರಿಗೆ' ಕೊಡಬೇಕೆಂದು ಬಾಯ್ದೆರೆಯುವವನಿದ್ದೆ. ಅಷ್ಟರಲ್ಲಿ 'ಅವರೇ'

'ಅಂತೂ ಮಳೆಗಾಲ ಸುರು ಆಯ್ತು ಅನ್ನಲಿಕ್ಕೆ ಅಡ್ಡಿ ಇಲ್ಲ' ಎಂದರು.

ನಾನು ಚಕಿತನಾಗಿ, 'ಯಾಕೆ? ನನ್ನ ಧೋತರ ಇನ್ನೂ ಒಣಗಿಲ್ಲೇನು?' ಎಂದೆ.

ಗೃಹಸೂತ್ರದ ಅಭ್ಯಾಸ ಮಾಡದವರಿಗೆ ಈ ಸತಿ-ಪತಿಸಂವಾದ ರಹಸ್ಯವು ತಿಳಿಯುವುದೊ ಇಲ್ಲವೊ? ಆದರೂ ಮನೆಯಲ್ಲಿ ನನ್ನ ಧೋತರಗಳು ಪಂಚಾಂಗದಂತಿದ್ದುವು ಎಂದು ಹೇಳುವುದರ ರಹಸ್ಯ ವಾದರೂ ತಿಳಿಯಬಹುದಲ್ಲ? ನಳಕ್ಕೆ ನೀರು ಬಂದರೆ ಮಳೆಗಾಲ ಎಂಬ

ದಿವ್ಯದೃಷ್ಟಿಯು 'ಅವರಿಗೆ' ಹೇಗೆ ಇದ್ದಿತೊ, ಹಾಗೆಯೆ ಧೋತರ ಒಣಗದಿದ್ದಲ್ಲಿ ಮಳೆಗಾಲ ಎಂಬ ಕಾಪ್ಯದೃಷ್ಟಿ ನನಗಿದ್ದಿತು. ಒಂದು ವೇಳೆ ಧೋತರ ಒಣಗಿತೆಂದೇ ಇಟ್ಟುಕೊಳ್ಳೋಣ. ಆಗ ಕೂಡ ಮಳೆಗಾಲದ ಭವಿಷ್ಯ (ಅಥವಾ ಭೂತವನ್ನಿ) ಅದರ ಮೇಲೆ ಢಾಳವಾಗಿ ಕಂಡುಬರುತ್ತಿತ್ತು. ಆಕಾಶದಲ್ಲಿ ಮೋಡಗಳಿದ್ದಂತೆ ಅಲ್ಲಲ್ಲಿ ಕಲೆಗಳು ಧೋತರದ ಮೇಲೆ. ವರ್ಷಕ್ಕೆ ಒಂದೇ ಒಂದಾವರ್ತಿ ಬರುವುದು ಮಳೆಗಾಲ; ಎಂದ ಮೇಲೆ ಅದನ್ನು ಆದರಾತಿಥ್ಯಗಳಿಂದ ಸ್ವಾಗತಿಸ ಬೇಕಲ್ಲವೆ?

ಸ್ವಾಮಿಗಿಂತ ಅವನ ಶಿಷ್ಯವೃಂದಕ್ಕೆ, ಅಧಿಕಾರಿಗಿಂತ ಅವನ ಸೇವಕ ವರ್ಗಕ್ಕೆ ಹೆಚ್ಚು ಪ್ರತಿಫಲವನ್ನು ಸಲ್ಲಿಸುವಂತೆ ಮೋಡಗಳಿಗಿಂತ ಅದರಿಂದ ಹುಟ್ಟುವ ರಾಡಿಗೆ ಹೆಚ್ಚು ಸನ್ಮಾನವನ್ನು ಕೊಡುವೆವು ನಾವು. ಮಳೆಗಾಲ ಬರುವ ಮುಂಚಿತ ನಗರದ ಬೀದಿಗಳಲ್ಲಿ ತಗ್ಗನ್ನು ತೋಡುವೆವು, ಬಂದ ನೀರು ಆತಿಥ್ಯವಿಲ್ಲದೆ ಹೋದೀತೆಂಬ ಹೆದರಿಕೆಯಿಂದ. ಬೀದಿಯ ಬದಿಗೆ ಹರಿ (ಗಟಾರು) ಗಳನ್ನೆ ನಾವು ಇಡುವುದಿಲ್ಲ. ಗುಡಿಗೆ ಹೋಗಿ ಅಲ್ಲಿಯದೆ ಭಸ್ಮವನ್ನು ಹಣೆಗೆ ಬಡೆದುಕೊಂಡು ದೇವನಿಗೆ ಮಾನ ಸಲ್ಲಿಸುವಂತೆ ವರ್ಷರಾಜನಿಂದ ನಿರ್ಮಿತವಾದ ರಾಡಿಯನ್ನೆ ಬಡೆದುಕೊಂಡು ವರ್ಷರಾಜನಿಗೆ ಮಾನವನ್ನು ಸಲ್ಲಿಸುವೆವು.

ಮಳೆಗಾಲದಲ್ಲಿ ನೋಡಿದತ್ತ ಕೊಡೆಗಳೆ ಕಾಣುವುವೆಂದು ವೃತ್ತ ಪತ್ರಗಳಲ್ಲಿ ಪ್ರಕಟವಾದುದನ್ನು ನೋಡಿದ್ದೇನೆ. ಈ ಕೊಡೆ-ಪಂಚಾಂಗ ವನ್ನು ನಾನು ಒಪ್ಪಲಾರೆ. ನಮ್ಮಲ್ಲಿಯ ಜನರ ಕೈಯೊಳಗಂತೂ ಕೊಡೆಗಳನ್ನು ಕಂಡಿಲ್ಲ ನಾನು. ಕಲಿಯ ಮಹಿಮೆಯಿಂದ ಎಲ್ಲವೂ ವಿಪರೀತವೆಂದು ನಾನು ಮೊದಲೇ ಹೇಳಿರುವೆನಲ್ಲವೆ? ಅದಕಾಗಿಯೆ ಕಾಲ್ಗಳನ್ನು ಮುಚ್ಚಬೇಕಾದ ಧೋತರವನ್ನು ಕೈಗಳಲ್ಲಿ ಹಿಡಿಯುತ್ತಿರ ಬಹುದೆ ಈ ಜನರು? ಅಂತೂ ಮಳೆಗಾಲ ಬಂದಿತೆಂದರೆ ಉಟ್ಟ ಧೋತರ ವನ್ನೆತ್ತಿ ಹಿಡಿಯಲು ಒಂದು ಕೈ ಕಟ್ಟಿಟ್ಟದ್ದೆ. ನಿಜವಾಗಿ ನೋಡಿದರೆ ಕೊಡೆಯನ್ನು ಹಿಡಿಯುವ ರಹಸ್ಯವೆ ಬೇರೆ ಎಂದು ಎಷ್ಟೋ ಜನರು

ತಮ್ಮ ಅನುಭವಗಳನ್ನು ಸ್ಮೃತಿಪಥಕ್ಕೆ ತಂದು ಹೇಳಬಹುದು. ನೆನಪಾಯಿತು, ಹೇಳುವೆ: ನನ್ನ ಗೆಳೆಯನೊಬ್ಬ ಕಾಯಿಪಲ್ಲೆ(ತರಕಾರಿ)ಯ ಮಾರ್ಕೆಟ್ಟಿಗೆ ಹೋಗಿದ್ದ. ಹಾಗೂ ಹೀಗೂ ಕೆಲವು ಕಾಯಿಪಲ್ಲೆಯನ್ನು ಕೊಂಡು ಕಿಸೆಯಲ್ಲಿ ಹಾಕಿಕೊಳ್ಳಬೇಕೆಂದ. ಆದರೆ ಕಿಸೆ ತುಂಬ ನೀರು! ಆಶ್ಚರ್ಯದಿಂದ ನೋಡಲು ತನ್ನ ಬದಿಗೆ ಒಬ್ಬನು ಕೊಡೆ ಹಿಡಿದುದೂ ಆಕಾಶದ ಗಂಗೆಯು ಶಿವನ ಜಟಾಮಾರ್ಗವಾಗಿ ಭೂಮಿಗಿಳಿವಂತೆ ಮುಗಿಲ ನೀರು ಕೊಡೆಯ ಮಾರ್ಗವಾಗಿ ತನ್ನ ಕಿಸೆಗಿಳಿಯುವುದೂ ಕಂಡುಬಂದಿತು! ಅಂದಿನಿಂದ ಮಳೆಗಾಲದಲ್ಲಿ ಅವನು ಬೀಜಗಳನ್ನಾಗಲಿ ಸಸಿಗಳನ್ನಾಗಲಿ ಮಾತ್ರ ಕೊಂಡುಕೊಂಡು ಕಿಸೆಯೊಳಗಿಡುತ್ತಾನೆ. ಮನೆ ಮುಟ್ಟುವಷ್ಟರಲ್ಲಿ ಅವು ಬೆಳೆದು ಹಚ್ಚ ಹಸಿರು ಕಾಯಿಪಲ್ಲೆಯಾಗಿರುತ್ತದಂತೆ! ಮಾರ್ಕೆಟು ಎಂದರೆ ನಾಗರಿಕರು ದಿನಾಲು ಅವಶ್ಯವಾಗಿ ನೆರೆಯಬೇಕಾದ ಸ್ಥಳ. ಅದಕ್ಕೆ ಮಾಳಿಗೆ ಇದ್ದರೆ ಒಳಿತಲ್ಲವೆ? ಎಂದು ಕೇಳಿ ನಿಮ್ಮ ಹುಚ್ಚು ಹೊರಗೆಡಹಬೇಡಿರಿ. ನಾಗರಿಕರ ಹಣವನ್ನು ಮಿತವ್ಯಯವಾಗಿ ಖರ್ಚು ಮಾಡುವುದು ನಮ್ಮ ನಗರ ಸಭಾಸದರ ಜೀವನ-ಧರ್ಮವಾಗಿದೆ—ಎಂಬುದು ನಿಮಗೆ ಗೊತ್ತಿರಲಿಕ್ಕಿಲ್ಲ. ವರ್ಷಕ್ಕೆ ಒಂದಾವರ್ತಿಯಾದರೂ ಮಳೆಯಿಂದ ಹೊಲಸೆಲ್ಲ ತೊಳೆದುಹೋಗುವ ಸಂಭವವಿರುವಾಗ ಆ ಮಾರ್ಕೆಟ್ಟಿಗೆ ಮಾಳಿಗೆಯ ಕಟ್ಟಿ ಹಾಕಿ ಹಣದ ಅಪವ್ಯಯ ಮಾಡುವುದು ಯಾವ ಜಾಣತನ? ಅದಕಾಗಿಯೆ ಮಳೆಯ ನೀರನ್ನು ನಗರದ ನಡುವಿನಲ್ಲಿಯೆ ಕೊಳ(ಚಿ)ಗಳಲ್ಲಿ ಕೂಡಿಸಿಡುವ ಪದ್ಧತಿಯೂ ನಮ್ಮಲ್ಲಿದೆ. ಆದಕಾಗಿಯೆ ಫಾಯರ್ ಎಂಜಿನ್‌ದ ವ್ಯವಸ್ಥೆಗೂ ಹಣದ ದುರುಪಯೋಗ ಮಾಡುವುದಿಲ್ಲ. ಅಷ್ಟೊಂದು ಹಟವಿದ್ದರೆ ಮಳೆಗಾಲದಲ್ಲಿಯೆ ಮನೆಗಳಿಗೆ ಬೆಂಕಿ ಹಚ್ಚಬಹುದು. ನಿಮ್ಮ ಮನೆಯನ್ನು ಸುಡುವ ನಿಮ್ಮ ಸ್ವಾತಂತ್ರ್ಯಕ್ಕೆ ನಗರಸಭೆಗಳು ಯಾವ ರೀತಿಯಿಂದಲೂ ಅಡ್ಡ ಬರುವುದಿಲ್ಲ.

ಮಳೆಗಾಲದ ಮಹಿಮೆ ನಿಜವಾಗಿಯೂ ನಮ್ಮ ನಗರಗಳಲ್ಲಿ ದೊಡ್ಡದಿದೆ. ಏನೆಂದು ಬಣ್ಣಿಸಲಿ ಅದನ್ನು? ಸಂಸಾರಸಾಗರವನ್ನೆ ಈಸುವ ಕಲೆಯನ್ನು ಕಲಿತುಕೊಳ್ಳಲು ಪ್ರತಿಯೊಂದು ಬೀದಿಯು ಶಾಲೆ

ಯಾಗಿರುವುದೆನಬೇಕೆ? ನಾಗರಿಕರ ದೇಹಸೌಂದರ್ಯವನ್ನು ಆಪಾದ ಬೆಳೆಯಿಸುವುದಕ್ಕೆ ಬೀದಿಗಳಲ್ಲಿ ಕೆಸರು ಕಟ್ಟಿ ಸಿಲ್ಲಿಸಿ ಪಾದಗಳನ್ನು ಕಮಲಗಳನ್ನಾಗಿ ಮಾಡುವ ಸೌಂದರ್ಯೋಪಾಸನೆಯ 'ಹುದಲಹೆಜ್ಜೆ' ಎನಬೇಕೆ? ಒಂದು ಕೈಯಲ್ಲಿ ಕೊಡೆ ಇನ್ನೊಂದು ಕೈಯಲ್ಲಿ ಉಟ್ಟ ಧೋತರ—ಹೀಗೆ ಶಾಪಾದಪಿ ಶರಾದಪಿ ಎಂಬ ಯೋಗ್ಯತೆಯು ನಾಗರಿಕನಲ್ಲಿ ಮೂಡಿಸುವ ತಪೋಯುಗವೆನಬೇಕೆ? ಇಲ್ಲವೆ ಪಶು-ಪಕ್ಷಿಗಳು ಕುಡಿದು ಸಾಯಬಹುದಾದ ರಾಡಿ ನೀರನ್ನು ಮನುಷ್ಯನಿಗಾಗಿ ಪ್ರತ್ಯೇಕವಾಗಿ ಕಾಯ್ದಿಡುವ ಭೂತದಯೆಯ ಕೃತಯುಗವೆನಬೇಕೆ? ಇಲ್ಲವೆ—ಇಲ್ಲವೆ—

ಧೋತರ ಒಣಗಿರಬಹುದಷ್ಟೆ ಈಗಲಾದರೂ? ಪಂಚಾಂಗ ಬೇಡ, ಫೋರಕಾಸ್ಟ (forecast) ಬೇಡ; ಹನ್ನೆರಡು ತಿಂಗಳು ಗೂಡುಗಟ್ಟಿದ ನಿರ್ಮಾಲ್ಯದ ನಾತವೆದ್ದಿರಲು, ಈ ನಾತವೆ ಬಣ್ಣರೂಪ ತಾಳಿತೇನೊ ಎನುವಂತಹ ನೀರು ನಳಗಳಿಂದ ಸುರಿಯುತ್ತಿರಲು, ಇಟ್ಟ ಕಾಲನ್ನು ಎತ್ತದಂತಹ ತನ್ಮಯಾವಸ್ಥೆಯನ್ನು ಬೀದಿಗಳು ತಂದುಕೊಡುತ್ತಿರಲು ವರ್ಷಾಋತುವಿನ ಸಂಹಾರಸಮಾರಂಭದ ಪ್ರಾರಂಭವಾಯಿತೆನಬಹುದಲ್ಲವೆ?

(೨೯—೭—೧೯೩೭)

೪. ಋತುಸಂಹಾರ

ಇಲ್ಲವೆ

ವರ್ಷಾಕಾಲದ ವಾಮನಾವತಾರ

ಮಳೆಗಾಲ ಬಂದಿತೆಂದರೆ ನನ್ನ ಗೆಳೆಯನಿಗೆ ಬಹಳ ಉಬ್ಬು. ಅದು ಅವನ ಸ್ವಭಾವ. ಆದರೆ ಈ ಸಲ ಅವನು ಹೊಸತೊಂದು ಶೋಧವನ್ನು ಮಾಡಿದ್ದಾನೆ. ಕೇಳುವುದೇನು? ಇಷ್ಟಾಗಿಯೂ ನೀವು ಕೇಳಲು ಹಟ ಹಿಡಿದರೆ ಹೇಳಲೇಬೇಕಾಗುವುದು. ಆ ಶೋಧವೆಂದರೆ ಹೀಗೆ. ಪ್ರತಿಯೊಂದು ಮಳೆಗಾಲದಲ್ಲಿ ಇಂತಿಂತಹ ಸ್ಥಳಗಳಲ್ಲಿ ಇಷ್ಟಿಷ್ಟು ಇಂಚು ಮಳೆಯಾಯಿತೆಂದು ಓದುವೆವಲ್ಲ? ಆದರೆ ಆ ಇಂಚಿನ ರಹಸ್ಯವೇನು, ಉದ್ದಿಶ್ಯವೇನು, ಅದನ್ನು ಅಳೆಯುವುದು ಹೇಗೆ ಮುಂತಾದ ವಿಷಯಗಳು ಎಷ್ಟು ಪ್ರಯಾಸಪಟ್ಟರೂ ನನಗೆ ತಿಳಿಯಲಿಲ್ಲ. ಹೊಲದ ನೆಲದೊಳಗೆ ಎಷ್ಟು ಆಳ ಹಸಿಯಾಗಿರುವುದೊ ಅಷ್ಟು ಇಂಚು ಎನಬಹುದೆ—ಎಂದೊಮ್ಮೆ ಸಂಶಯ. ಆದರೆ ಒಕ್ಕಲತನಕ್ಕೂ ಮಳೆಗೂ ಯಾವ ತರದ ಸಂಬಂಧವಿಲ್ಲೆಂದೂ ಹೊಲದ ಮಳೆ-ಬೆಳೆಗಳನ್ನು ಮಾಮಲೇದಾರರ ರಿಪೋರ್ಟ್‌ನಲ್ಲಿಯೆ ಅಳೆಯುವರು ವೃತ್ತಪತ್ರಗಳಲ್ಲಿ ಅಳೆಯುವುದಿಲ್ಲವೆಂದೂ ನನ್ನ ಗೆಳೆಯನು ಸಿದ್ಧಮಾಡಿ ತೋರಿಸಲು ಆ ಸಂಶಯದ ನಿವಾರಣೆಯಾಯಿತು. ಮತ್ತೆನ್ನನ್ನು ಮತ್ತೊಂದು ವಿಚಾರ ಒಂದಿತು: ಮೋಡಗಳಿಗೂ ಮಳೆಯಾಗುವ ಆಯಾ ಸ್ಥಳಗಳಿಗೂ ಇರುವ ಅಂತರವನ್ನೆ ಇಂಚುಗಳಲ್ಲಿ ಅಳೆಯುತ್ತಿರಬಹುದೆ—ಎಂದು. ಆದರೆ ಎತ್ತರದ ಸ್ಥಳ

ಗಳಲ್ಲಿಯೆ ಯಾವಾಗಲೂ ಹೆಚ್ಚು ಇಂಚು ಮಳೆಯಾಗುವುದನ್ನು ಕಂಡು ಆ ವಿಚಾರವನ್ನು ಬಿಟ್ಟುಕೊಡಬೇಕಾಯಿತು.

ಹೀಗೆ ಅಜ್ಞಾನಾಂಧಃಕಾರದಲ್ಲಿ ಮುಳುಗಿದ ಒಂದು ಮುಂಜಾವಿನಲ್ಲಿ ಮುಗುಳ್ನಗೆಯ-ಮುಂಬೆಳಕನ್ನು ಬೀರುತ್ತ ಬಂದನು ನನ್ನ ಗೆಳೆಯ.

'ನನಗೆ ತಿಳಿಯಿತು!' ಎಂದನು.

'ಏನದು?' ಎಂದು ಬೆರಗಾದ ದನಿಯಲ್ಲಿ ಕೇಳಿದೆ ನಾನು.

'ಇಂಚು!'

'ಹಾಗಾದರೆ **ಈ ದಿವಸ** ಬೆಳಗಿನಲ್ಲಿ ಎಷ್ಟು ಇಂಚು ಮಳೆಯಾಗಿದೆ?'

'ಈ ದಿವಸ' ಎಂಬ ಶಬ್ದಗಳ ಮೇಲೆ ಜೋರು ಯಾಕೆಂದರೆ ಹಿನ್ನಿಯ ಮಳೆಯ ಸಮಾಚಾರ ಪತ್ರಿಕೆಗಳಲ್ಲಿದ್ದಿತು. ಜಯಶ್ರೀಯು ಹಾಕಿದ ಮಾಲೆ ಏನೋ ಎನುವಂತೆ ದಂತಪಂಕ್ತಿಗಳ ಬೆಳಗನ್ನು ಮುಖದ ತುಂಬ ಸುತ್ತಿಕೊಂಡು ನನ್ನ ಗೆಳೆಯ 'ಒಂದೂವರೆ ಇಂಚು' ಎಂದು ತಡವರಿಸದೆ ಉತ್ತರವನ್ನಿತ್ತನು. ನನ್ನ ಮುಖದಲ್ಲಿ 'ಶಿಷ್ಯಸ್ತೇಹಂ ಶಾಧಿ ಮಾಂ ತ್ವಾಂ ಪ್ರಪನ್ನಂ? ಎಂಬ ದಿಗ್ಭ್ರಾಂತನ ಕಳೆ ಮೂಡಿತು. ಅದನ್ನು ಕಂಡು ನನ್ನ ಗೆಳೆಯನು ಇಂಚುಪಟ್ಟಿ (scale) ಯನ್ನು ಕಿಸೆಯೊಳಗಿಂದ ತೆಗೆದು ನನ್ನ ಪಾದಕ್ಕೆ ಹಚ್ಚಿ 'ನೋಡು' ಎಂದನು. ನೋಡಿದೆನು, ನನಗೆ ಅರ್ಥವಾಗಲಿಲ್ಲ.

'ಒಂದುವರೆ ಇಂಚು ನೆಲದಿಂದ; ಒಂದುವರೆ ಇಂಚುಗಳ ವರೆಗೆ ಗೆರೆಯನ್ನು ನೋಡು' ಎಂದನು.

ನೋಡಿದೆನು, ಇನ್ನೂ ಅರ್ಥವಾಗಲಿಲ್ಲ.

'ಒಂದುವರೆ ಇಂಚು ಪಟ್ಟಿಯನ್ನು ನೋಡಬೇಡ, ಆ ಅಳತೆಯ ವರೆಗಿನ ನನ್ನ ಪಾದವನ್ನು ನೋಡು' ಎಂದನು.

ನೋಡಿದೆನು.

'ಅಲ್ಲಿಯ ವರೆಗೂ ನಿನಗೆ ಯಾವುದಾದರೂ ಗುರುತು ಕಾಣುವುದೊ?' ಎಂದು ಕೇಳಿದನು.

ತಟ್ಟನೆ ಹೊಳೆಯಿತು! ಒಂದುವರೆ ಇಂಚುಗಳ ವರೆಗೆ ಪಾದವು ಕೆ-ಸ-ರಿ-ನ ರಾ-ಡಿ-ಯ-ಲ್ಲಿ ಮು-ಳು-ಗಿ-ದ ಗು-ರು-ತು!

‘ ಒಂದುವರೆ ಇಂಚು ಕಾಲು ಕೆಸರಾಗಬೇಕಾದರೆ ಎಷ್ಟು ಮಳೆ ಬೇಕಾಗುವದೊ ಅದಕ್ಕೆ ಒಂದೂವರೆ ಇಂಚು ಮಳೆ ಎನ್ನುವರು, ತಿಳಿಯಿತೆ? ’ ಎಂದು ಶಾಲಾಧ್ಯಾಪಕನ ಠೀವಿಯಲ್ಲಿ ಗಟ್ಟಿಯಾಗಿ ಬಿಡಿಬಿಡಿಸಿ ಹೇಳಿದನು

ನನಗೂ ಸಂತೋಷ. ಒಂದು ದೊಡ್ಡ ತೊಡಕು ಬಿಟ್ಟಂತಾಯಿತು.

ಈಗ ಎಂತಹ ಮಳೆಗಾಲವೆ ಇರಲಿ, ನನ್ನ ‘ ಅಳೆಗಾಲ ’ ವು ತಟ್ಟನೆ ಮಳೆಯನ್ನಳೆಯುವುದು. ನಮ್ಮ ದೇಶದಲ್ಲಿ ಪ್ರತಿಯೊಬ್ಬನಿಗೆ ಹೀಗೆ ಮಳೆಯನ್ನಳೆಯಲು ಬರುತ್ತಿರುವಾಗ ನಮ್ಮ ಅರಿಯದ ರೈತರು ಸುಮ್ಮನೆ ಗೋಳಿಡುವರಲ್ಲ! ಭೂದೇವಿಗಾಗಿ ಪೂಜ್ಯಭಾವದಿಂದಲೊ, ಭೂತದಯೆಯ ಸಾಕ್ಷಾತ್ ಸದಾಚಾರವೆಂದೊ ನಮ್ಮ ಜನರು ಪಾದರಕ್ಷೆಗಳನ್ನೆ ಧರಿಸುವುದಿಲ್ಲ. ಮಳೆಗಾಲದಲ್ಲಿ ಈ ರೂಢಿಯ ಅನುಕೂಲತೆಯು ಎಷ್ಟೆಂದು ಬೇರೆ ಹೇಳಬೇಕೆ? ಒಂದೊಂದು ಹನಿಗೆ ಒಬ್ಬೊಬ್ಬನನ್ನು ಹುಟ್ಟಿಸುವ ಅಹಿರಾವಣನಂತೆ ಒಂದೊಂದು ಹೆಜ್ಜೆಗೆ ಒಂದೊಂದು ಕೆಸರಕವಣೆಗಲ್ಲನ್ನು ಹುಟ್ಟಿಸುವ ರಾಕ್ಷಸೀ ವೃತ್ತಿಯು ಮೊಜ್ಜೆಗಳಿಗಿದೆ. ಪ್ರಾಚೀನಕರ್ಮದಂತೆ ಹಿಂದಿನಿಂದಲೆ ಈ ಕೆಸರು ಕೈದುಗಳು ನಮ್ಮನ್ನು ಸುತ್ತುವವು. ನಾನು ನಗರಸಭಾಧ್ಯಕ್ಷನಾದರೆ ಮಳೆಗಾಲದಲ್ಲಿ ಮೊಜ್ಜೆ ಮೆಟ್ಟಿಕೊಂಡು ತಿರುಗುವವರಿಗಾಗಿ ಬೇರೆ ಕಾಲುದಾರಿಯನ್ನೆ ಹಾಕಿಸುವೆ. ಒಂದುವೇಳೆ ನಾನು ಸರ್ವಾಧಿಕಾರಿ (dictator) ಯಾದರೆ ಮೊಜ್ಜೆಗಳನ್ನು ಹಿಂದು-ಮುಂದಾಗಿ ತಿರುವಿ ಹಾಕಿಕೊಳ್ಳುವಂತೆ ಕಟ್ಟಳೆಯನ್ನು ಮಾಡುವೆ; ಎಂದರೆ, ಕೆಸರು ಕಣ್ಣುಮುಂದೆಯೆ ಸಿಡಿದು ಪರಿಸ್ಥಿತಿಯ ಜ್ಞಾನವಾದರೂ ಇವರಿಗಾಗಬಹುದು. ಆದರೆ ನಾನು ಈಗಿದ್ದ ಸ್ಥಿತಿಯಲ್ಲಿಯೆ, ‘ ನನ್ನ ಗೆಳೆಯನಂತೆ ನಗೆಗೀಡಾಗುವಿರಿ ’ ಎಂದಿಷ್ಟೆ ಹೇಳಬಲ್ಲೆ. ಆ ಕತೆ ಹೀಗೆ. ಒಮ್ಮೆ ನನ್ನ ಗೆಳೆಯನ ಅಭಿಪ್ರಾಯದಂತೆ ಮಳೆಗಾಲದಲ್ಲಿ ಆಣೆಕಲ್ಲುಗಳ ಮಳೆ ಸುರಿಯಿತು! ಯಾರು ಎಷ್ಟು ಹೇಳಿದರೂ ನನ್ನ ಗೆಳೆಯ ತನ್ನ ಹಟ ಬಿಡಲಿಲ್ಲ. ಮಳೆಗಾಲದಲ್ಲಿ ಆಣೆಕಲ್ಲುಗಳ ಮಳೆ ಶಕ್ಯವಿಲ್ಲೆಂದು ಪಂಚಾಂಗ-ವಿಜ್ಞಾನಶಾಸ್ತ್ರ-ಅನುಭವ ಈ ಮೂರುಗಳ ಆಧಾರದಿಂದಲೂ ಹೇಳಿದೆವು, ಅವನು ಒಪ್ಪಲಿಲ್ಲ.

ತಾನೊಮ್ಮೆ ಬೀದಿಯಲ್ಲಿ ಹೋಗುವಾಗ—ಬಚ್ಚಿದ್ದಾಗ!- ಅದಿಕೆ ಯಷ್ಟು ಆಣೆಕಲ್ಲುಗಳು ತನಗೆ ತಾಕಿದವು ಎಂದು ಅವನ ಹಟ! ಸಾಕು, ಸುಜ್ಞರಾದ ವಾಚಕರೆ, ಹೆಚ್ಚಿಗೆ ಹೇಳುವುದೇನು? ನಿಮಗೆ ಕೂಡ ಇಷ್ಟ ರಲ್ಲಿ ನನ್ನ ಗೆಳೆಯನ ಭ್ರಾಂತಿರಹಸ್ಯ ಹೊಳೆದಿರಬಹುದು. ಪಾಪ! ಮೊಚ್ಚೆಗಳನ್ನು ಮೆಟ್ಟಿಕೊಂಡೊಬ್ಬನ ಹಿಂದಿನಿಂದ ನಡೆದಿದ್ದಾನೆ, ಸಿಡಿದಿದೆ ಕಲ್ಲು—ಕೆಸರುಗಳ ಮಳೆ ಮುಖಕ್ಕೆ! ಈ ಸಂಗತಿಯು ಸತ್ಯತೆ ಹೊಳೆದು 'ಖಜೀಲಾ' ಎನಿಸಿದ ಮೇಲೆ ನಗರಸಭೆಯ ಮೇಲೆ (Damages) ಕ್ಕಾಗಿ ಫಿರ್ಯಾದಿ ಮಾಡಬೇಕೆಂದು ಅರ್ಭಟಿಸಿದ. ಬೀದಿಗೆ ಬೇಕಾದ ಕಲ್ಲು—ಕೆಸರುಗಳನ್ನು ಕಣ್ಣಲ್ಲಿ ತಾನು ಇಟ್ಟುಕೊಂಡಾಗ ಯಾರು ಯಾರಿಗೆ ನಷ್ಟ ಕೊಡಬೇಕಾಗುತ್ತಿತ್ತೊ!

ನನ್ನ ಗೆಳೆಯನಂತೆ ನನಗೂ ಮಳೆಗಾಲದ ಮಾರ್ಮಿಕವಾದ ಶೋಧ ವೊಂದನ್ನು ಮಾಡುವ ಭಾಗ್ಯ ಲಭಿಸಿತು. ನಾನೊಮ್ಮೆ ಆತುರತೆಯಿಂದ ಪತ್ರದ ದಾರಿಯನ್ನೆ ಕಾಯುತ್ತ ಬಾಗಿಲಲ್ಲಿ ನಿಂತುಕೊಂಡಿದ್ದೆ. ಹೊರಗೆ ಮಳೆಯು ಸುರಿಯುತ್ತಲಿದೆ. ಪಾಪ! ಇಂತಹ ಮಳೆಯಲ್ಲಿ ಪೋಷ್ಟ ಮನ್ನನಿಗೆ ಎಂತಹ ತೊಂದರೆ ಎಂದು ಆಗಾಗ ಕನಿಕರ ಬರುವುದು. ನನ ಕಳಕಳಿಯ ಆರ್ತನಿನಾದವನ್ನು ಕೇಳಿಯೊ ಏನೋ ಆ ದಿನ ಭಗವಂತನು ಪೋಷ್ಟಮನ್ನನಿಗೆ ಕೊಡೆಯನ್ನು ದಯಪಾಲಿಸಿದ್ದನು. ಅವನು ಕೊಡೆ ಹಿಡಿದುಕೊಂಡು ಬರುವುದನ್ನು ನೋಡಿ ನನಗೆ ಅತ್ಯಂತ ಸಮಾಧಾನವಾ ಯಿತು. ಅಷ್ಟರಲ್ಲಿ ಅವನೂ ನನ್ನ ಕಡೆಗೆಯೆ ಬಂದು ಒಂದು ಕಾರ್ಡನ್ನು ಕೊಟ್ಟನು. ನಾನು ದಾರಿ ಕಾಯುತ್ತಿದ್ದ ಕಾರ್ಡ ಅದು! ಆತುರತೆ ಯಿಂದ ಓದತೊಡಗುವಷ್ಟರಲ್ಲಿ ಆ ಪೋಷ್ಟಮನ್ನನು ಪತ್ರ ನನ್ನದಲ್ಲ ವೆಂದು ತಿರುಗಿ ಬೇಡಿದನು! ನಾನು ಕೋಪಿಸಬಹುದೆಂಬ ಹೆದರಿಕೆ ಯಿಂದ ಅವನೇ ಮೊದಲು ಮಾತನಾಡಿದನು. 'ಯಾರದೊ ತಪ್ಪಿ ಬಂದೇತರಿ. ಅದರ ಮ್ಯಾಲೆ ಅಡ್ರೆಸ್ಸೆ (address) ಇಲ್ಲ' ಎಂದು ನಾಚಿಕೆ ಯಿಂದಲೂ ಹೆದರಿಕೆಯಿಂದಲೂ ನಾಲಗೆ ಸವರತೊಡಗಿದನು. ನೋಡಿ ದರೆ ನಿಜವಾಗಿಯೂ ಅಡ್ರೆಸ್ಸು ಇಲ್ಲ! ಆದರೂ ಪತ್ರ ನನ್ನದೆ! ಇಷ್ಟರಲ್ಲಿ ಓದಿದ ಸಂದರ್ಭ ವಾಕ್ಯದಿಂದ ಎಳ್ಳಷ್ಟು ಸಂಶಯವಿದ್ದಿಲ್ಲ. ಆದರೆ

ಪೋಷ್ಟಮನ್ನನಿಗೆ ವಿಶ್ವಾಸವಾಗುವುದೆಂತು! ಇಷ್ಟರಲ್ಲಿ ನನ್ನ ಸುದೈವದಿಂದ 'ಅದ್ರೆಸ' ಸಿಕ್ಕಿತು, ಪೋಷ್ಟಮನ್ನನ ಅಂಗೈಯಲ್ಲಿ! ಆ ಗಾವಳಿಸು ಮಹತ್ತ್ವದ್ದಾದ ಪತ್ರಗಳ ಮೇಲೆ ಕೊಡೆಯನ್ನು ಹಿಡಿಯದೆ ಛತ್ರಚಾಮರದಂತೆ ತನ್ನ 'ಬುರುಡೆ'ಯ ಮೇಲೆ ಹಿಡಿದಿದ್ದಾನೆ. ಸೋವ ಕೊಡೆಗುಂಟ ಇಳಿದು ಪತ್ರಗಳ ಮೇಲೆ-ಘೂ! ಇವರ ನಿಷ್ಕಾಳಜಿ ಹಾಳಾಗಲಿ! 'ಪೋಸ್ಟ ಖಾತೆಯು ಕೊಟ್ಟ ಕೊಡೆ ನಿನಗಲ್ಲ, ಪತ್ರಗಳ—' ತನೆದೆ, ಇಷ್ಟರಲ್ಲಿ ಪೋಷ್ಟಮನ್ನನು ಮುಂದಿನ ಮನೆಗೆ ಹಾರಿದ್ದನು. ಅಂದಿನಿಂದ ನನ್ನ 'ಅದರೆಸಾ' ಒಮ್ಮೆಯೂ ಮಾಯವಾಗಲಿಲ್ಲ— ಕಾರ್ಡಿನ ಇನ್ನೊಂದು ಬದಿ ಮಾತ್ರ ಪೋಷ್ಟಮನ್ನನ ಅಂಗೈ ಹುಣ್ಣಿನಂತಾಗುತ್ತಿತ್ತು. ಓದುವದು ಪೋಷ್ಟಮನ್ನನ ಕೈಯಲ್ಲಿ ಮೂಡಿದ್ದನ್ನು! ಆದುದರಿಂದ, ವಾಚಕರೆ, ಮಳೆಗಾಲದಲ್ಲಿ ನನಗೆ ಪತ್ರ ಬರೆಯುವುದಾದರೆ ವಿಳಾಸವನ್ನು ಒಳಗೆ ಬರೆದು ಮಜಕೂರನ್ನು ಮೇಲೆ ಬರೆಯುವ ದಯೆ ಇರಲಿ. ಇಲ್ಲದಿದ್ದರೆ 'ಕೊಡೆ ಎಂಬನಾತ ಪತ್ರವನು'!

ಮೇಲೆ ಕಾಣಿಸಿದಂತಹ ಅನೇಕ ಸಂಗತಿಗಳು ಮಳೆಗಾಲದಲ್ಲಿ ಅವಶ್ಯವಾಗಿ ನಡೆಯುವುವಾದ್ದರಿಂದ ನನಗೆ ಪಂಚಾಂಗ ಇಲ್ಲವೆ ಫೋರಾಕಾಸ್ಟಿನ ಅವಶ್ಯಕತೆ ಇಲ್ಲ ಎಂದು ಮೊದಲೇ ಹೇಳಿದ್ದೇನೆ. ಹೆಚ್ಚಿಗೆ ಹೇಳುವುದೇನು! ವಾಮನನು ಒಂದು ಪಾದವನ್ನು ಆಕಾಶದಲ್ಲಿಟ್ಟನೆಂದು ಕತೆಯನ್ನು ಕೇಳಿಲ್ಲವೆ? ಆ ವಾಮನಾವತಾರವು ನಮ್ಮೂರಲ್ಲಿಯೇ ಜರುಗಿತೆಂದೂ, ಮಳೆಗಾಲವಿದ್ದುದರಿಂದ ನೆಲದ ಮೇಲೆ ಕಾಲನ್ನಿಡುವುದು ಅಶಕ್ಯವೆನಿಸಿ ವಾಮನನು ಹಾಗೆ ಮಾಡಿದನೆಂದೂ- ಇನ್ನೂ ನಮ್ಮಲ್ಲಿ ಐತಿಹ್ಯವಿದೆ. ಮತ್ತೆ ಯಾರನ್ನೋ ಸಿಟ್ಟಿನಿಂದ ರಸಾತಳಕ್ಕೆ ಮೆಟ್ಟಿದನಂತೆ. ಮುನಸಿಪಾಲಟಿಯ ಸದಸ್ಯರು ಆ 'ಕಾಲ'ದಲ್ಲಿಯೂ ಇದ್ದರೆಂದು ಇದರ ಅಭಿಪ್ರಾಯವೆ? ಅಥವಾ ವಾಮನನ - ಕಾಲನಲ್ಲಿ ಹನ್ನೆರಡು ಇಂಚು (= ಫುಟ್ - ಪಾದ) ಮಳೆಯಾಯಿತೆಂದು ಅಭಿಪ್ರಾಯವೆ?

(೨೨—೭—೧೯೩೭)

೫. ಋತುಸಂಹಾರ

ಎಂದರೆ

ನಡುಗಿಸುವ ನೆನಪು

ಪ್ರತಿವರುಷ ಚಳಿಗಾಲದ ಪ್ರಾರಂಭಕ್ಕೆ ಜ್ವರದಿಂದ ಹಾಸಿಗೆ ಹಿಡಿಯುವುದು ನನಗೊಂದು ಚಟ ಮತ್ತು ಮೋಜು. ಇಂಗ್ಲಿಷದಲ್ಲಿ ಹವಾಮಾಪಕ ಯಂತ್ರಕ್ಕೆ ಬೆರೊಮೀಟರ (Barometer) ಎನ್ನುವರಂತೆ; ಅದನ್ನು ಲಕ್ಷ್ಯದಲ್ಲಿಟ್ಟು ನನ್ನ ಜ್ವರಕ್ಕೆ ನಾನು ‘ಬಾರೊ ಮಿತ್ರ, ಎನ್ನುತ್ತಿರುವೆ. ಇದರಿಂದಂತೂ ನನ್ನ ಗೆಳೆಯನಿಗೆ ಇನ್ನಿಷ್ಟು ಅಸಹ್ಯವೆನಿಸುತ್ತಿದ್ದಿತು. ಜ್ವರ ತಪ್ಪಿಸುವುದನ್ನು ಬಿಟ್ಟು ಅದನ್ನು ಮಿತ್ರನಂತೆ ಸ್ವಾಗತಿಸುವ ಮೊದಲ ಮೂರ್ಖ ನಾನಂತೆ! ‘ಚಳಿಗಾಲದಲ್ಲಿಯೆ ಯಾಕೆ ನಿನಗೆ ಜ್ವರ?’ ಎಂದು ಹಲ್ಲು ನಡುಗಿಸುತ್ತ ಕೇಳುವನು. ಯಾಕೆಂದರೇನು? ಮತ್ತುಳಿದ ಕಾಲದಲ್ಲಿ ಜ್ವರದ ಉಪಯೋಗವೇನು? ಚಳಿಗಾಲದಲ್ಲಿ ನಮ್ಮನ್ನು ಬೆಚ್ಚಗಿಡಲು ಜ್ವರಕ್ಕಿಂತ ಹೆಚ್ಚು ಫಲಕಾರಿಯಾದ ಸಾಧನವಿದೆಯೆ? ನನಗಂತೂ ಒಡತನದಿಂದ ಬಳಲುವ ನನ್ನ ಭಾರತೀಯ ಬಂಧುಗಳಿಗೆ ಜ್ವರವನ್ನು ಸಕಾಲಕ್ಕೆ ತಂದುಕೊಳ್ಳುವ ನನ್ನ ವಿದ್ಯೆಯನ್ನು (‘ಕಲೆ’ ಎಂದರೆ ಹೆಚ್ಚು ಶೋಭಿಸಬಹುದಲ್ಲವೆ?) ಪುಕ್ಕಟೆಯಾಗಿ ಕಲಿಸಿಕೊಡಬೇಕೆಂದೆನಿಸುವುದು. ಆದರೆ ಚಿಕ್ಕಮಕ್ಕಳಿಗೆ ಮಾತ್ರ ಕಲಿಸುವ ಕಾರಣವಿಲ್ಲ ಎಂದು ನನ್ನ ಅಭಿಪ್ರಾಯ. ಇದಕ್ಕೆ ನನ್ನ ಗೆಳೆಯನು ಒಪ್ಪಲಿಲ್ಲ. ಆ ಮೇಲೆ ನಮ್ಮಿಬ್ಬರ ಚಿಕ್ಕತನದ — ಒಡನಾಡಿಯ

ಚಿಕ್ಕತನದ — ನೆನಪುಗಳನ್ನು ಅವನ ಲಕ್ಷ್ಯಕ್ಕೆ ತಂದುಕೊಟ್ಟೆ. ಆಗ ಒಪ್ಪಿದನು. ಯಾಕೆಂದು ಕೇಳುವಿರಾ? ನಿಮಗೂ ಹೇಳಿದೆನೆಂದರೆ ನೀವೂ ನನ್ನ ಮಾತಿಗೆ ಒಪ್ಪಬಹುದಾದ್ದರಿಂದ ಹೇಳುವೆ. ನಾನೂ ನನ ಗೆಳೆಯನೂ ಕೂಡಿಯೆ ಬೆಳೆದವರು, ಶಿಕ್ಷಣವನ್ನು ಕೂಡಿಯೆ ಪ್ರಾರಂಭಿಸಿದೆವು. ನಮ್ಮ ಒಬ್ಬ ಶಿಕ್ಷಕನ ಹೆಸರು 'ಚಳಿಗಾಲ' ಎಂದಿದ್ದಿತು. ಅದಕ್ಕೆ ಎರಡು ಕಾರಣಗಳು. ಅವನದೊಂದು ಕಾಲ ಚಳಿಗಾಲದ ದಿವಸದಂತೆ ಸಣ್ಣದಿತ್ತು. ಆದರೆ ಆ ಚಿಕ್ಕ ವಯಸ್ಸಿನಲ್ಲಿ ನಮಗೆ ಈ ಕಾಲದ ಕಾವ್ಯಮಯತೆ ತಿಳಿದಿರಲಿಲ್ಲ. ನಮ್ಮದು ಎರಡನೆಯ ಕಾರಣ. ಅವನು ಬಂದನೆಂದರೆ ನಮ್ಮ ಮೈ ಥರಥರ ನಡುಗುತ್ತಿತ್ತು, ಹಲ್ಲು ಕನಕರಿಸುತ್ತಿದ್ದುವು, ಬೆನ್ನ ಮೇಲೆ ಬೆತ್ತ ಬೀಳುವವರೆಗೆ ಬೆಚ್ಚಗಾಗುತ್ತಿರಲಿಲ್ಲ. ಆದ್ದರಿಂದ ಎಷ್ಟೋ ಸಲ ಬೆತ್ತಕ್ಕಾಗಿ ನಾವು ಬಾಯ್ಬಿಡುತ್ತ ನಿಲ್ಲುತ್ತಿದ್ದೆವು. ನಮ್ಮ ಸಹಪಾಠಿಯೊಬ್ಬನು ಬಾಯ್ಬಿಟ್ಟದ್ದು ನನಗೆಂದಿಗೂ ಮರೆಯುವಂತಿಲ್ಲ. ಆ ದಿನ ಭೂಮಿತಿಯ ಪಾಠ ನಡೆದಿತ್ತು. ಭೂಮಿತಿ ಶಾಸ್ತ್ರವೆಂದರೆ ಯುಕ್ಲಿಡ್ ಎಂಬ ಮಹಾಶಯನ ಕೈಗಂಟಂತೆ. ಯಾವ ಮಹಾಶಯನೆ ಇರಲಿ, ಮೊದಲು ಅವನ ಜಾತಿಯನ್ನು ತಿಳಿದುಕೊಳ್ಳುವ ಹಂಬಲ ನಮ್ಮ ಶಿಕ್ಷಕರಿಗೆ. ವಿದ್ಯಾರ್ಥಿಗಳಂತೂ ಮೊದಲನೆಯ ದಿವಸವೆ ತಮ್ಮ ಜಾತಿಪತ್ರಕವನ್ನು ಒಪ್ಪಿಸಬೇಕಾಗುತ್ತಿತ್ತು. ಆದರೆ ಹೊರಗಿನ ಸಭ್ಯಗೃಹಸ್ಥರು ಬಂದರೆ ಅವರ ಜಾತಿಯನ್ನು ತಿಳಿದುಕೊಳ್ಳುವುದು ಹೇಗೆ? ನಮ್ಮ ಶಿಕ್ಷಕರು ಒಂದು ಉಪಾಯವನ್ನು ಸಾಧಿಸಿದ್ದರು. ಬಂದ ಸಾಹೇಬರಿಗೆ ಬಾಳೆ-ಎಲೆಗಳನ್ನು ಕೊಡುವುದು; ಅದನ್ನು ಸ್ವೀಕರಿಸಿದರೆ ಸಾಹೇಬ ಬ್ರಾಹ್ಮಣ, ಇಲ್ಲವಾದರೆ 'ಮ್ಲೇಚ್ಛಮುಂಡೇಗಂಡ' (ಮ್ಲೇಚ್ಛ ಎಂಬುದು ಗಂಡ ಎಂಬುದರ ವಿಶೇಷಣ, ಯಾಕೆಂದರೆ 'ಮುಂಡೆ'ಗೆ ಜಾತಿ ಇಲ್ಲವಂತೆ)! ಅಂತೂ ಈ ದಿನ ಯುಕ್ಲಿಡ್ ಮಹಾಶಯನ ಜಾತಿಯನ್ನು ತಿಳಿದುಕೊಳ್ಳುವ ಕುತೂಹಲ ಅವರಿಗೆ.

'ಯುಕ್ಲಿಡನ ಜಾತಿ ಯಾವುದು?' ಎಂದು ಕೇಳಿಯೆ ಬಿಟ್ಟರು.

ನಾವೆಲ್ಲರೂ ಪೇಚಿನಲ್ಲಿ ಸಿಕ್ಕಿಕೊಂಡೆವು. ದೇವನು ನಮ್ಮ ದೇಶದವನಾದ್ದರಿಂದ, ನಮ್ಮ ದೇಶದಲ್ಲಿಯೆ ಅವತಾರ ತಾಳುತ್ತಿದ್ದುದರಿಂದ

ನನಗಾಗಿಯೇ ಜಾತಿ ಹಾಕಿಕೊಟ್ಟನು, ಮಿಕ್ಕ ದೇಶದವರಿಗೆ ಆ ಭಾಗ್ಯ ಇದ್ದಿರಲಿಲ್ಲ ಎಂದು ನಮ್ಮ ಜಂಭ; ಯೂಕ್ಲಿಡನಂತೂ ನಮ್ಮ ದೇಶದವನಲ್ಲ. ಹೀಗೆ ಯೋಚಿಸಲ್ಲಿರುವಾಗ ನಮ್ಮ ಸಹಪಾಠಿಯೊಬ್ಬನು ತಟ್ಟನೆ ಎದ್ದು ನಿಂತನು.

'ಯೂಕ್ಲಿಡನು ಮುಸಲ್ಮಾನರಿ' ಎಂದನು.

ಶಿಕ್ಷಕರು ಮೈಲಿಗೆಯಾದಂತೆ ಸಿಡಿದು ನಿಂತು 'ಯಾತರ ಮೇಲಿಂದ' ಎಂದು ಗದ್ದರಿಸಿದರು. 'ಅವರ ಇಬ್ಬರು ಹೆಂಡಿರ ಹೆಸರುಗಳ ಮೇಲಿಂದ' ಎಂದನು ನಮ್ಮ ಸಹಪಾಠಿ!

ಶಾಸ್ತ್ರವನ್ನು ಬರೆದುದರಿಂದ ಯೂಕ್ಲಿಡನು ಬ್ರಹ್ಮಚಾರಿ ಇದ್ದಿರಬೇಕು ಎಂದು ನಮ್ಮ ಕಲ್ಪನೆ ಇದ್ದಿತು.

'ಯಾರು ಆ ಇಬ್ಬರು? ಅವರ ಹೆಸರೇನು?' ಎಂದು ಗದ್ದರಿಸಿದರು ಶಿಕ್ಷಕರು.

ಸಹಪಾಠಿಯು ಎದೆ ಸೆಟೆಸಿ ನಿಂತನು. ನಮ್ಮೆಲ್ಲರಿಗೂ ಗೊತ್ತಿಲ್ಲದ ಮಾತು ತನಗೆ ಗೊತ್ತಿದೆ ಎಂಬ ಹೆಮ್ಮೆಯು ಹುಂಜದಂತೆ ಅತ್ತಿತ್ತ ನೋಡುತ್ತ 'ಇಸ್ಥಾಬೇ, ಇಮಾಬೇ ಎಂಬ ಇಬ್ಬರು———'

ಸಾಕು. ಸುಜ್ಞವಾಚಕರಿಗೆ ಹೆಚ್ಚಿಗೆ ಹೇಳುವುದೇನು? ನಮ್ಮ ಸಹಪಾಠಿಗೆ ೮-೧೦ ದಿನಗಳವರೆಗೆ ಸರ್ವಾಂಗ ಕಾಯಿಸಿಕೊಳ್ಳಬೇಕಾಯಿತು. ನೀರು ಚಳಿಯಿಂದ ಹಿಮುಗಟ್ಟಲು ಅದರ ಘನತೆ ಬೆಳೆಯುವುದಂತೆ; ಆದರೆ ನಮ್ಮ ಸಹಪಾಠಿಯ ಮೈ ಘನತೆ ಮೀರಿ ಉಬ್ಬಿತು. ಎಷ್ಟೋ ದಿವಸಗಳವರೆಗೆ ದಿನದ ಬಟ್ಟೆ ಮೈಗೆ ಸಾಲುತ್ತಿರಲಿಲ್ಲ. ಅಂದು ಕೂಡ ಆದಷ್ಟು ಬೇಗ ಅವನನ್ನು ಮನೆಗೆತ್ತಿಕೊಂಡೊಯ್ದುದು ನಮ್ಮದೇ ಸುದೈವ; ಇನ್ನಿಷ್ಟು ತಡವಾಗಿದ್ದರೆ ಹೊರಬಾಗಿಲಲ್ಲಿಯೇ ಹಿಡಿಸುತ್ತಿರಲಿಲ್ಲ.

ಯಾವ ಸಂದರ್ಭದಲ್ಲಿ ನಾನಿದನ್ನು ಹೇಳತೊಡಗಿದೆ? ಹಂ— ಸ್ಮರಣೆಗೆ ಬಂದಿತು. ಜ್ವರವನ್ನು ತಂದುಕೊಳ್ಳುವ ವಿದ್ಯೆಯನ್ನು ಚಿಕ್ಕ ಮಕ್ಕಳಿಗೆ ಕಲಿಸುವ ಕಾರಣವಿಲ್ಲ ಎಂದು ನನ್ನ ಗೆಳೆಯನ ಮನಸ್ಸನ್ನು ಒಲಿಸುವುದಕ್ಕೆ. ವಾದದಲ್ಲಿ, ತರ್ಕದಲ್ಲಿ ನನ್ನ ಗೆಳೆಯನಿಗೆ ಅವಮಾನ

ವಾಯಿತು, ಸಿಟ್ಟು ಬಂದಿತು. ‘ಹೊಡೆತದಿಂದ ಮೈ ಬೆಚ್ಚಗಾಗುತ್ತಿದ್ದರೆ ಚಳಿಗಾಲದಲ್ಲಿ ದೇಶದ ತುಂಬ ಪೋಲೀಸರನ್ನೆ ಬಿಟ್ಟುಬಿಡುವುದು ಒಳಿತಲ್ಲವೆ?' ಎಂದು ಒಳ್ಳೇ ಅಣಕಿನಿಂದ ಕೇಳಿದನು. ಪಾಪ! ಅವನಿಗೇನು ಗೊತ್ತು? ಮಂದಿಯ ಮೈ ಬೆಚ್ಚಗಾಗುವಕಿಂತ ತಮ್ಮ ಕೈ ಬೆಚ್ಚಗಾಗುವ ವರೆಗೆ ಮಾತ್ರ ಪೋಲೀಸರು ಹೊಡೆಯುವರೆಂದು ಅವನಿಗೆ ತಿಳಿದಿರಲಿಲ್ಲ. ‘ಹೀಗೆಂದುದಕ್ಕೆ ಪೋಲೀಸ ಡಿಪಾರ್ಟಮೆಂಟಿನವರು ನಿನ್ನ ಮೇಲೆ ಲಾಯ್ಬಲ್ (libel) ಕೇಸ್ ಹಾಕುವರು' ಎಂದು ನನ್ನನ್ನೆ ಹೆದರಿಸಲು ಯತ್ನಿಸಿದನು. ‘ಅಸಮವಾದಿ'ಯ ತಲೆ ಅವನದು. ಸಮನಮಾಡುವುದು ಹೇಗೆ?

ನನ್ನ ಗೆಳೆಯನ ಮಾತು ಹೋಗಲಿ. ನನ್ನ ವಿದ್ಯೆಯನ್ನು ಬಡ ಬಾಂಧವರಿಗೆ ಕಲಿಸುವುದು ಹೇಗೆ ಎಂಬುದನ್ನರಿತುಕೊಳ್ಳಲು ತಾವು ಕುತೂಹಲಿಗಳಾಗಿರಬಹುದು. ಯದ್ಯೇವಂ ಲಾಲಿಸೋಣವಾಗಲಿ. ಇಂದಿನ ಸುಧಾರಣೆಯ ದಿವಸಗಳಲ್ಲಿ ಇದು (ಎಂದರೆ ನನ್ನ ವಿದ್ಯೆಯನ್ನು ಕಲಿಸುವುದು) ಅತ್ಯಂತ ಸುಲಭವಾದ ಮಾತು. ಯಾಕೆಂದರೆ, ನಮ್ಮ ಸುಧಾರಣೆಗೆ ನಗರ ಸಂಸ್ಕೃತಿಯೆ ತಳಹದಿ. ನಗರ-ಸಂಸ್ಕೃತಿ ಎಂದರೆ ರಾಗ-ದ್ವೇಷ-ಮದ-ಮತ್ಸರಾದಿಗಳನ್ನು ತ್ಯಜಿಸಿ ಪರಸ್ಪರ ಸಹಾಯಕ ಮತ್ತು ಸೌಹಾರ್ದ ಬುದ್ಧಿಯಿಂದಿರುವುದು. ನಮ್ಮ ನಗರಗಳ ಸೌಹಾರ್ದವೆಂದರೆ ಎಷ್ಟೆಂದು ಹೇಳಲಿ? ಹಿಂದೆ ಆಶ್ರಮಗಳಲ್ಲಿ ಪಶು-ಪಕ್ಷಿಗಳು ಕೂಡ ತಮ್ಮ ನಿಸರ್ಗ ವೈರವನ್ನು ಬಿಟ್ಟು ಸ್ನೇಹದಿಂದಿರುತ್ತಿದ್ದುವಂತೆ; ನಮ್ಮ ನಗರಗಳು ಈ ಆಶ್ರಮಗಳಿಗಿಂತ ಮೇಲು. ಇಲ್ಲಿ ಜಡ (ಅಚೇತನ) ವಸ್ತುಗಳು ಕೂಡ ಪರಸ್ಪರ ಸ್ನೇಹದಿಂದ ಹೊಂದಿಕೊಂಡಿರುವುವು. ಉದಾಹರಣಾರ್ಥವಾಗಿ ನಮ್ಮ ಮನೆಗಳು: ಗೋಡೆಗೆ ಗೋಡೆ, ಹಿತ್ತಲಕ್ಕೆ ಹಿತ್ತಲ, ಅವರ ಮನೆಯ ಇಲಿಗಳು ನಮ್ಮ ಮನೆಯ ಕಾಳು-ಕಡಿಗೆ, ನಮ್ಮ ಮನೆಯ ನಿರ್ಮಾಲ್ಯದ ನೀರು ಅವರ ಮನೆಯ ಪ್ರಾಕಾರ ಕಂದಕ—ಹೀಗಿರುವುದು ನಮ್ಮ ಮನೆಗಳ ಪರಸ್ಪರ ಸ್ನೇಹಸಾನ್ನಿಧ್ಯ. ಆದುದರಿಂದ ನನ್ನಲ್ಲಿ ಬಂದ ಜ್ವರವು ವ್ಹಿಜಿಟ್ ಫೀ ಇಲ್ಲದೆ ನನ್ನ ನೆರೆಮನೆಯವರಿಗೆ ದರ್ಶನಲಾಭವನ್ನು ಕೊಡುವುದು.

ನಮ್ಮದು ನಗರಸಂಸ್ಕೃತಿ ಎಂದರೆ ಹಳ್ಳಿಗಳ ಗತಿ ಏನು ಎಂಬ ಹೆದರಿಕೆ ಬೇಡ. ಹಳ್ಳಿಗಳಲ್ಲಿ ಹೆಚ್ಚಾಗಿ ವಾಸಿಸುವ ರೈತರಿಗೆ ದೇವನಿದ್ದಾನೆ ಆರ್ತತ್ರಾಣ, ರೋಗಕ್ಕೆ ರಾಮಬಾಣ. ರೈತರಿಗೆ ಚಳಿಗಾಲವು ತಡೆಯು ಲಿಕ್ಕಿಲ್ಲವೆಂದು ತಿಳಿದು, ಹಳ್ಳಿಗಳಿಂದ ಅದನ್ನು ವರ್ಗಾಯಿಸಿ, ಅದರ ಜಾಗೆಯಲ್ಲಿ 'ಬರಗಾಲ' ಎಂಬ ಹೊಸ ದೂತನನ್ನು ನಿಯಮಿಸಿದ್ದಾನೆ ದೀನದಯಾನಿಧಿ. ಕಾಳು ಕಟ್ಟದ ಭತ್ತದ ಹುಲ್ಲನ್ನಾಗಲಿ, ಜೋಳದ ಮೊದಲಾದ ದಂಟುಗಳನ್ನಾಗಲಿ ಗೂಡುಗಟ್ಟಿ ಹೊತ್ತಿಸಿದರೆ—ಅಹ! ಅದೆಂತಹ ಜ್ಯೋತಿರ್ಮಯ ಜೀವನ!

ಅಗ್ನಿರ್ಜ್ಯೋತಿರಹಃ ಶುಕ್ಲಃ ಷಣ್ಮಾಸಾ ಉತ್ತರಾಯಣಂ ।
ತತ್ರ ಪ್ರಯಾತಾ ಗಚ್ಛಂತಿ ಬ್ರಹ್ಮ ಬ್ರಹ್ಮವಿದೋ ಜನಾಃ ॥

ಎಂದು ಪರಮಾತ್ಮನು ಗೀತೆಯಲ್ಲಿ ಹಾಡಿದ್ದು ಸುಳ್ಳಾಗಬಹುದೆ? ರೈತರಿಗೆ ಬ್ರಹ್ಮಪದವಿ! ಪುನರ್ಜನ್ಮವಿಲ್ಲ! ಇದೇ **ಶ್ರೇಷ್ಠ**ವಾದ **ಮಾರ್ಗ** ಯೋಗಿಗಳಿಗೆ. ಅದಕ್ಕೆಂದೇ ಚಳಿಗಾಲದಲ್ಲಿ **ಮಾರ್ಗಶೀರ್ಷ**ವಿದೆ. ಅಸ್ತು.

ಹೀಗೆ ಹಳ್ಳಿಗಳಿಗೆ ನನ್ನ ವಿದ್ಯೆಯ ಆವಶ್ಯಕತೆಯೇ ಇಲ್ಲವೆಂದು ಕ್ರಮಪ್ರಾಪ್ತವಾಗಿ ಸಿದ್ಧಮಾಡಿ ನಾವು ಮತ್ತೆ ಮೂಲವಿಷಯವಾದ ನಗರಗಳತ್ತ ತೆರಳುವಾ. ವಿಜಾಪುರದ ಗೋಲಗುಮ್ಮಟವನ್ನು ನೋಡಿದ್ದೀರಾ? ಅಲ್ಲಿ ಒಂದೇ ಮಾತನ್ನು ಏಳುಸಲ ದನಿಗೂಡಿಸುವ ಚಮತ್ಕಾರವಿದೆ. ಆದರೆ ಚಳಿಗಾಲದಲ್ಲಿ ನಮ್ಮ ನಗರಗಳಲ್ಲಿ ಅದಕ್ಕೂ ಹೆಚ್ಚಿನ ಚಮತ್ಕಾರವು ಗೋಚರವಾಗುವುದು. ಒಂದು ಮಾತು ಏಳು ಸ್ವರಗಳಲ್ಲಲ್ಲ, ಎಲ್ಲ ಸ್ವರಗಳಲ್ಲಿಯೂ ದನಿಗೂಡುತ್ತಿರುವುದು! ಮನೆಯಿಂದ ಮನೆಗೆ, ವ್ಯಕ್ತಿಯಿಂದ ವ್ಯಕ್ತಿಗೆ ಆ ಮಾತಿನ ಪಡಿಸದ್ದು ಕೇಳಬರುವುದು. ಆ ಮಾತಾದರೂ ಎಂತಹದು! ಹೃದಯದಿಂದ ನೇರವಾಗಿ ಹೊರಹೊಮ್ಮು ವುದು — ಅಥವಾ — ಕೆಮ್ಮುವುದೆನ್ನಿ. ಯಾಕೆಂದರೆ ಆ ಮಾತು — ತಮ್ಮೆಲ್ಲರಿಗೆ ಪರಿಚಿತವಾದ ಶಬ್ದದಲ್ಲಿ ಹೇಳಬೇಕಾದರೆ — ಇನ್‌ಫ್ಲು ಎಂಝಾ. ಚಳಿಗಾಲದಲ್ಲಿ ಇನ್‌ಫ್ಲುಎಂಝಾ ಎಂದರೆ ಭಾರತಕ್ಕೆ

ನಗರಸಂಸ್ಕೃತಿಯು ಹಾಕಿಕೊಟ್ಟ ಉಂಬಳಿ, ಬಡವರಿಗೆ ಬೆಚ್ಚಗಿರಲು ಸುತ್ತಿಕೊಳ್ಳುವ 'ದೇವನಗರಿ'ಯ ಕಂಬಳಿ.

ಭಾರತೀಯರು ಸಹೃದಯರೆಂದು ಜಗತ್ತಿಗೆಲ್ಲ ಕೂಗಿ ಹೇಳುವುದೇನೋ ಎನುವಂತೆ ಕೆಮ್ಮಿಸುವ ಇನ್‌ಫ್ಲುಎಂಝಾ ಮಹಾಶಯನು ಚಳಿಗಾಲದಲ್ಲಿ ಎಷ್ಟು ಜನರನ್ನು ಬೆಚ್ಚಗಾಗಿರಿಸುವುದಿಲ್ಲ?

(೧೪—೮—೧೯೩೭)

೬. ಋತುಸಂಹಾರ

ಸಾರಾಂಶ

ಚಳಿಗಾಲವೆಂಬ ತಿಳಿಗಾಲ

ಚಳಿಗಾಲದ ವರ್ಣನೆಯನ್ನು ನಾನು ಹೊಸತಾಗಿ ಮಾಡಬೇಕಾಗಿಲ್ಲ. ‘ತರಣಿ । ಸೋಮನಂತಿರೆ ಬಿಸಿಲ್ ಬೆಳ್ದಿಂಗಳೋಲಾಗೆ’ ಎಂದು ಕನ್ನಡದ ಉದ್ದಾಮಕವಿಯೊಬ್ಬ ಬಣ್ಣಿಸಿದ್ದಾನೆಂದು ನನ್ನ ಗೆಳೆಯ ಆಗಾಗ ಹೇಳುತ್ತಿರುವ. ನನಗಿಂತ ನನ್ನ ಗೆಳೆಯನಿಗೆ ಕನ್ನಡ ಸಾಹಿತ್ಯದ ಅಭ್ಯಾಸ ಮತ್ತು ಅಭಿಮಾನ ಹೆಚ್ಚು. ಅದಕಾಗಿ ಮೇಲಿಂದ ಮೇಲೆ ನನಗೂ ಅವನಿಗೂ ಕನ್ನಡ ಸಾಹಿತ್ಯ ವಾದದ ವಿಷಯವಾಗುತ್ತಿತ್ತು. ಕೊನೆಗೆ ಅವನು ಸಿಟ್ಟಿಗೆದ್ದರೆ ಅಂದಿನ ಸಭಾ ‘ಬರಖಾಸ್ತು.’ ನನಗೆ ಎಳ್ಳಷ್ಟೂ ಅಭಿಮಾನವಿಲ್ಲೆಂದು ಅವನ ಪ್ರತಿಸಲದ ಕೋಪನಾಟಕದ ಭರತವಾಕ್ಯ. ನಾನಾದರೂ ಏನು ಮಾಡಲಿ? ಅಭಿಮಾನ ಬರಲು ಇಂಜೆಕ್ಶನ (injection) ಗಳಿದ್ದರೆ ನಾನು ಶರಪಂಜರದ ಮೇಲೆ ಮಲಗಬಹುದಾಗಿತ್ತು; ಆದರೂ ಅಭಿಮಾನ ಬರುತ್ತಿದ್ದಿತೊ ಇಲ್ಲವೊ! ಎಲ್ಲ ತಪ್ಪು ನನ್ನದೇ ಅಲ್ಲ ಎಂದು ನನ್ನ ಹಟ. ಉದಾಹರಣೆಗಾಗಿ ಮೇಲಿನ ಕಾವ್ಯಾವತರಣಿಕೆಯನ್ನು ನೋಡಿರಿ. ‘ಸೂರ್ಯ ಚಂದ್ರನಾಗುವನು, ಬಿಸಿಲು ಬೆಳದಿಂಗಳಾಗುವುದು’! ಎಂತಹ ಅಸಂಬದ್ಧ ವಿಚಾರ! ಚಳಿಗಾಲದಲ್ಲಿ ರಾತ್ರಿಸಮಯದಲ್ಲಿ ಸೂರ್ಯೋದಯವಾಗುತ್ತಿದ್ದಿತೆ? ಇಲ್ಲವೆ

ಹಗಲನ್ನೆ 'ಚಂದ್ರಮುಖಿ'ಯರ ಸಹವಾಸದಲ್ಲಿ ಕಳೆಯುತ್ತಿದ್ದರೆ ಆಗಸ ಜನರು? ನಾನೂ ಲೇಖಕನೇನೊ ನಿಜ; ಆದರೆ ಲೇಖಕನಿಗೆ ಚಳಿಗಾಲದಲ್ಲಿ ಸೊಬಗು-ಸಿಂಗಾರ ಕಾಣಬೇಕೆಂಬ ನನ್ನ ಗೆಳೆಯನ ಮಾತಿಗೆ ನನ್ನ ಒಪ್ಪಿಗೆ ಇಲ್ಲ. ಕೊನೆಗೆ ತನ್ನ ಮಾತನ್ನು ಸಾಧಿಸಿಕೊಳ್ಳಲು ನನ್ನ ಗೆಳೆಯನು ಕಾರಣವೊಂದನ್ನು ಶೋಧಿಸಿದ. 'ಚಳಿಗಾಲದಲ್ಲ ಸೊಬಗು-ಸಿಂಗಾರ ಇರಲೇಬೇಕು; ಅದಕಾಗಿಯೆ ಕವಿಗಳಿಗೂ ಲೇಖಕರಿಗೂ ಸಂಬಂಧಪಟ್ಟ ಸಾಹಿತ್ಯಸಮ್ಮೇಳನವು ಚಳಿಗಾಲದಲ್ಲಿಯೆ ನೆರೆಯುವುದು ಅಂತೆ!

ವಾಚಕರೆ, ಈ ಮಾತನ್ನು ಕೇಳಿ ನನ್ನಂತೆ ನೀವೂ ಬೆರಗಿನಿಂದ 'ಬುರುಗೀಭೂತ'ರಾದರೆ ಆಶ್ಚರ್ಯವಲ್ಲ. ಯಾಕೆಂದರೆ, ಸಾಹಿತ್ಯ ಸಮ್ಮೇಳನ ಒಂದೇ ಅಲ್ಲ, ಸಾಮಾನ್ಯವಾಗಿ ನಮ್ಮ ದೇಶದಲ್ಲಿ ಕಾಂಗ್ರೆಸಿನಿಂದ ಕಸಗೂಡಿಸುವವರ ಸಂಘದ ವರೆಗೆ ಎಲ್ಲ ಅಧಿವೇಶನಗಳು ಚಳಿಗಾಲದಲ್ಲಿಯೆ ಕೂಡುವುವು. ಈ ಮಾತನ್ನು ನೀವು ಒಪ್ಪುವಿರಲ್ಲವೆ? ಆದರೆ ನನ್ನ ಗೆಳೆಯನ ಹಟ ಅಂತಹುದು! ಆವನು 'ಇಸಮುವಾದಿ' ಎಂದು ಹೇಳಿಲ್ಲವೆ? ಅವನ ಅನೇಕ 'ಇಸಮು'ಗಳಲ್ಲಿ ಆಂಟಿ-ಇಂಪೀರಿಯಾಲಿಸಮು' (Anti-Imperialism) ಎಂಬುದೊಂದಿದೆ. ಆ ದೊಡ್ಡ ಶಬ್ದದ ಅರ್ಥವೇನೊ! ಆದರೆ ಕಾಂಗ್ರೆಸಿಗೂ ಈ 'ಅಂಟಿನ ಇಂಪು ಇರುವೆ ಇಸಮಿ'ಗೂ ಏನೋ ಸಂಬಂಧ ಇದೆ ಅಂತೆ! ಅದಕಾಗಿ ಕಾಂಗ್ರೆಸನ್ನು ಚಳಿಗಾಲದಲ್ಲಿ ಕೂಡಿಸುವರಂತೆ. ಚಳಿಗಾಲದಲ್ಲಿ ಕ್ರಿಸ್ತ ಮತಾನುಯಾಯಿಗಳ ಹಬ್ಬ ಬಂದಿದೆಯಲ್ಲ? ಆ ಕಾಲಕ್ಕೆ ಕ್ರಿಸ್ತಮತಾನುಯಾಯಿಗಳಾದ ಬ್ರಿಟಿಶರು ಏನೂ ಕೆಲಸವಿಲ್ಲದೆ ಹೊತ್ತುಗಳೆಯುವರಂತೆ. ಅದಕಾಗಿ ಆ ಕಾಲದಲ್ಲಿ ಕಾಂಗ್ರೆಸನ್ನು ಕೂಡಿಸಿದರೆ ಇತ್ತ ಅವರ ಹಬ್ಬದ ತತ್ತ್ವ ಅಲ್ಲಗಳೆದಂತಾಯಿತಂತೆ, ಇತ್ತ ಏನೂ ಕೆಲಸವಿಲ್ಲದಕ್ಕಾಗಿ ನಾವು ಮಾಡುವ ಗೊತ್ತುವಳಿ ಓದಲೇಬೇಕಾಗುವುದಂತೆ! ಆದರೆ ಇತ್ತಿತ್ತಲಾಗಿ ಮಹಾತ್ಮಾಗಾಂಧಿಯವರೂ ಇಂಪೀರಿಯಾಲಿಸ್ಟ ಆಗುತ್ತಿದ್ದಾರಂತೆ, ಅದಕ್ಕೆ ಅವರು ಕ್ರಿಸ್ತಮಸ್‌ದಲ್ಲಿ ಕಾಂಗ್ರೆಸನ್ನು ಕೂಡಿಸಬಾರದು ಎಂದರಂತೆ! ಇದು ತರ್ಕವೆ-ತಲೆತಿರುಕವೆ?

ಆಯಿತು, ಹೀಗೆ ಹೇಳಿದ ಕೂಡಲೆ ನನ್ನ ಗೆಳೆಯನ ಸಹನವೇ ತೀರಿತು. ನನ್ನನ್ನು ಚುಚ್ಚಿ ಮಾತನಾಡತೊಡಗಿದ. 'ನೀನು ಲೇಖಕ ನಲ್ಲದೆ ನಾಟಕಾರನೂ ಅಲ್ಲವೆ? ಜನರ ಅಂತರಂಗವನ್ನು ಅರಿಯುವ ಯೋಗಚಕ್ಷು ನಿನಗಿದೆಯಲ್ಲವೆ? ಆಗಲಿ—ತಮ್ಮ ಯೋಗದ ಪ್ರದರ್ಶನ ವಾಗಲಿ! ಚಳಿಗಾಲಕ್ಕೂ ಸಮ್ಮೇಳನಗಳಿಗೂ ಯಾವ ಸಂಬಂಧ ಎಂಬು ದರ ಮರ್ಮೋದ್ಘಾಟನವಾಗಲಿ!' ಎಂದು ಮೂದಲಿಸತೊಡಗಿದ.

ನಾನು ವಿಚಾರಮಾಡಿದೆ. ಮಾತಿಗೆ ಮಾತು ಬೆಳಿಸಿದರೆ ಪಿತ್ತವೆ ಹೆಚ್ಚಾಗಬಹುದೆಂದು ಅತ್ಯಂತ ನಿರ್ವಿಕಾರದ ಧ್ವನಿಯಲ್ಲಿ, ಸುಪ್ರಸನ್ನ ಮುಖಮುದ್ರೆಯಿಂದ ಒಂದೊಂದಾಗಿ ಕಾರಣಗಳನ್ನು ಹೇಳತೊಡಗಿದೆ. ಕೇಳುವಿರಾದರೆ ಅನಿವಾರ್ಯವಾದ ಶಬ್ದವ್ಯತ್ಯಾಸದಿಂದ ಆ ಕಾರಣಗಳನ್ನೆ ಇಲ್ಲಿ ಕಾಣಿಸುವೆ.

(೧) ಮೊದಲು ಸಮ್ಮೇಳಗಳಲ್ಲಿ ನಡೆಯತಕ್ಕ ಮುಖ್ಯಕಾರ್ಯ ಯಾವುದೆಂಬುದನ್ನು ನೋಡೋಣ. ಬೇರೆ ಬೇರೆ ಕಡೆಗಳಿಂದ ಕೂಡಿದ ವಿದ್ವಾಂಸರು ಚರ್ಚೆ ಮಾಡುವುದೆ ಮುಖ್ಯಕಾರ್ಯವಲ್ಲವೆ? ಚರ್ಚೆ ಫಲಕಾರಿಯಾಗಬೇಕಾದರೆ ಶಾಂತಿ ಬೇಕು. ಸಮಾಧಾನ ಬೇಕು. ಬೇನ ಗೆಯ ಬಿಸಿಲಲ್ಲಿ ಚರ್ಚೆ ಮಾಡಿದರೆ ಬಾಯಿಗಿಂತ ಕೈಗಳದೆ ಉಪಯೋಗ ಹೆಚ್ಚಾಗಬಹುದು ಚರ್ಚೆಯಲ್ಲಿ. ಚಳಿಗಾಲದಲ್ಲಿ ಈ ಹೊರಗಿನ ದಾಹ ಕಡಿಮೆ ಇದ್ದು, ಕೈಗಳನ್ನು ಬೆಚ್ಚಗಾಗಿ ಕಿಸೆಯಲ್ಲಿಟ್ಟುಕೊಂಡು ಮೈ ಬೆಚ್ಚಗಿರಲು ಹಾವಭಾವಗಳಿಂದ ಕುಣಿದಾಡುತ್ತ ಚರ್ಚೆಯನ್ನು ಮಾಡ ಬಹುದಲ್ಲವೆ?

(೨) ಇನ್ನೊಂದು ತರದ ಕಾರಣವಿದೆ ಎಂದು ನನ್ನ ಸಂದೇಹ. ಈ ಕಾರಣವು ನಮ್ಮ ದೇಶದ ವಿಶಿಷ್ಟ ಪರಿಸ್ಥಿತಿಗೆ ಸಂಬಂಧಿಸಿದೆ ಎಂದು ನನ್ನ ತರ್ಕ. ಯಾವುದು ಆ ವಿಶಿಷ್ಟ ಪರಿಸ್ಥಿತಿ? ಅರ್ಥಾತ್, ಸರ್ವಸಾ ಮಾನ್ಯವಾದ ಬಡತನ. ಬಡತನದ ಬಾಧೆ ಚಳಿಗಾಲಕ್ಕೆ ಹೇಗೆ ಹೆಚ್ಚಾಗು ವುದೆಂದು ಬೇರೆ ಹೇಳಬೇಕಾಗಿಲ್ಲ. ಮೈಯನ್ನು ಬೆಚ್ಚಗಿರಿಸುವ ಬಟ್ಟೆ ಗಳಿಗಾಗಿ ನಮಗೆ ಹಣದ ಅನುಕೂಲತೆ ಇಲ್ಲ. ಹಾಗಾದರೆ ಮಾಡ ಬೇಕೇನು? ವ್ಯಕ್ತಿಯಿಂದ ನೀಗದ ಕೆಲಸವನ್ನು ಸಂಘಶಕ್ತಿಯಿಂದ

ಸೀಗಿಸುವುದೊಂದು ಮಾನವನ ಚಾತುರ್ಯ. ಅದಕಾಗಿ ಸಮ್ಮೇಳನ ಕ್ಕೆಂದು ಎಲ್ಲರೂ ಒಂದೆಡೆ ನೆರೆಯುವರು. ಸಾಕಲ್ಲವೆ? ಎಲ್ಲರೂ ಒಂದೆಡೆ ಪತ್ತಿಕ್ಕಿ ಸೇರಿಕೊಂಡುದಕ್ಕಾಗಿ ಎಲ್ಲರಿಗೂ ಮೈ ಬೆಚ್ಚಗೆನಿಸಬಹುದಲ್ಲವೆ? ಇಂತಹ ಸಾಮುದಾಯಿಕ ಚಟುವಟಿಕೆ (Communistic activity) ಗಳಿಗೆ ಅಸ್ಪದ ದೊರೆಯುವುದೆಂಬ ಉದ್ದೇಶದಿಂದ ರಾಜಕೀಯ ಸಮ್ಮೇಳನಗಳು ಚಳಿಗಾಲದಲ್ಲಿಯೆ ಕೂಡುವುವೆಂದು ನನ್ನ ಯಥಾಮತಿ ಅಭಿಪ್ರಾಯ.

(೩) ಈಗ ನಾನು ಹೇಳುವ ಈ ಮೂರನೆಯ ಕಾರಣದ ಜಬಾಬ್ದಾರಿ ನನ್ನದಲ್ಲ ಎಂಬುದನ್ನು ದಯವಿಟ್ಟು ವಾಚಕರು ಲಕ್ಷ್ಯದಲ್ಲಿಡ ಬೇಕು. ಇದನ್ನು ಯಾರೊ ಎಲ್ಲಿಯೊ ಹೇಳಿದಂತಿದೆ; ಯಾರೂ ಹೇಳಿದ್ದಿಲ್ಲ ವಾದನೆ ನಾನು ಕನಸಿನಲ್ಲಿ ಕಂಡಿರಬಹುದು. ಅಂತೂ ಈ ಉದ್ದೇಶವು ಬುದ್ಧಿಪೂರ್ವಕವಾಗಿ ನನಗೆ ತೋಚಿದ್ದಲ್ಲ ಎಂದು ಹೇಳುವುದಿಷ್ಟೆ ನನ್ನ ಆಶಯ. ಆ ಕಾರಣವಾದರೂ ಯಾವುದು ಎಂದು ತಾವು ಕುತೂಹಲಿ ಗಳಾಗಿರಬಹುದು. 'ವಕ್ತಾರನ ಯುಕ್ತಿ' ಎಂದು ಅದಕ್ಕೆ ಹೆಸರಿಡ ಬಹುದು. ಸಮ್ಮೇಳನಗಳನ್ನು ತಾವು ನೋಡಿರುವಿರಷ್ಟೆ. ಆ ಸಮ್ಮೇಳನದ ಘನವಿದ್ವಾಂಸರನ್ನು ತಾವು ಒಂದು ವೇಳೆ ನೋಡಿರಲಿಕ್ಕಿಲ್ಲ. ನನಗೂ ನನ್ನ ಗೆಳೆಯನಿಗೂ ಆ ಭಾಗ್ಯ ದೊರೆತಿದೆ. ಈ ಘನವಿದ್ವಾಂಸರು ಆಯಾ ವಿಷಯಗಳ ತಜ್ಞರಾಗಿರುವರು, ಪಂಡಿತರೆನಿಸುವರು. ಪಂಡಿತರೆಂದರೆ ಬುದ್ಧಿ ಇದ್ದವರು, ಬಾಯಿ ಇದ್ದವರಲ್ಲ. ಅದೇನು ಸೋಜಿಗವೊ! ಮನುಷ್ಯನು ಹೆಚ್ಚೆಚ್ಚು ತಜ್ಞನೆನಿಸಿದಂತೆ, ಅವನ ಮಾತನಾಡುವ ಶಕ್ತಿ ಕಡಮೆಯಾಗುವುದು. ತಜ್ಞರ ಲೆಕ್ಚರುಗಳೆಂದರೆ ನಿದ್ರೆಯ ಔಷಧಿ ಎಂಬ ಅನುಭವ ಎಲ್ಲರಿಗೆ ಬಂದಿರಲು ಸಾಕು. ಅಥವಾ ಹೆಚ್ಚೇನು? ಬೊಗಳುವ ನಾಯಿ ಕಚ್ಚುವುದಿಲ್ಲ, ಕಚ್ಚುವ ನಾಯಿ ಬೊಗಳುವುದಿಲ್ಲ ಎನ್ನುವರಲ್ಲವೆ? ಹಾಗೆ ನಾಲಗೆ ಇದ್ದಲ್ಲಿ ಬುದ್ಧಿ ಕಡಮೆ, ಬುದ್ಧಿ ಇದ್ದಲ್ಲಿ ನಾಲಗೆ ಕಡಮೆ ಎಂದು ಹೇಳಬಹುದು. ಆದರೆ—ಏನು ಹೇಳುವವನಿದ್ದೆ ನಾನು? ಹಾಂ- ಪಂಡಿತರ ಭಾಷಣಗಳಾಗುವುದರಿಂದ ಸಮ್ಮೇಳನಗಳನ್ನು ಚಳಿಗಾಲದಲ್ಲಿ ಕೂಡಿಸುವರೆಂದು. ಪಂಡಿತರು ಭಾಷಣದಲ್ಲಿ ಎಂದಿನಂತೆ ತೊದಲಿಸಿದರೆ ಅದು ದೋಷನೆನಿಸುವುದಿಲ್ಲ. ಆದರೆ—ಪಾಪ!—ಚಳಿಗಾಲದ ಚಳಿಗೆ

ಅವರ ನಾಲಗೆ 'ಕಟಕರಿಸು'ವುದು ಎಂದೇ ನಾವು ತಿಳಿಯುವೆವು. ನಮಗೂ ಅಭಿಮಾನ, ಪಂಡಿತರಿಗೂ ಸಮಾಧಾನ. ಪಂಡಿತರಿಗೆ ಸಮಾಧಾನವಾಗದಿದ್ದರೂ ಅಸಮಾಧಾನವಾದದ್ದು ತಿಳಿದುಬರುವುದಿಲ್ಲ. ಯಾಕೆಂದರೆ, ಚಳಿಗಾಲದ ತಂಪುಹೊತ್ತಿನಲ್ಲಿ ಪಂಡಿತನು ಸಭೆಯಲ್ಲಿ ಎಷ್ಟು ಹೆದರಿದರೂ ಸಭಾಕಂಪವು ಸಹಜಕಂಪವೆನಿಸುವುದು, ಬೆವರು ಸುರಿಯುವುದಂತೂ ಶಕ್ಯವೇ ಇಲ್ಲ. ಅಹುದೊ ಅಲ್ಲವೊ? ನೀವು ಏನೆಂದರೂ ನಿಮ್ಮ ತಲೆ ನಡುಗುತ್ತಿರುವುದೇನೊ ನಿಜ.

ಉಪಸಂಹಾರ

ವಾಚಕರ ಕೃಪೆ ಇರಲಿ. ನಾನು ಏನಾದರೂ ಅಲ್ಲದ-ಸಲ್ಲದನ್ನು ಬರೆದಿದ್ದರೆ ಅದು ನನ್ನ 'ಋತುಸಂಹಾರ' ಎಂದು ವಾಚಕರ ಸ್ಮರಣೆಯಲ್ಲಿರಲಿ. ಅನೇಕ ತರದ ನಿರುದ್ಯೋಗಿಗಳಿಂದ ತುಂಬಿದ ಈ ಭರತಖಂಡದಲ್ಲಿ, ಈ ಕಲಿಯುಗದಲ್ಲಿ ನಮ್ಮೆಲ್ಲರಿಗೂ 'ಋತುಸಂಹಾರ'ವನ್ನೆ ಮಾಡಬೇಕಾಗುವುದರಿಂದ ನನ್ನ ಅನುಭವವು ತಮಗೆ ಲಾಭಕರವಾದೀತೆಂದು ಬಯಸಿ ಬರೆದಿದ್ದೇನೆ. ಎಲ್ಲರಿಗೂ ಮಾಡಬೇಕಾದ 'ಋತುಸಂಹಾರ'ವೆಂದರೇನು ಎಂಬ ಸಂಶಯ ಬೇಡ. ನನಗೆ ಕನ್ನಡ ಸಾಹಿತ್ಯದ ಅಭ್ಯಾಸವಿಲ್ಲೆಂದು ಮೇಲೆಯೆ ಹೇಳಿರುವೆನಲ್ಲವೆ? ನನ್ನ ವಿಚಾರಗಳು ಇಂಗ್ಲಿಶ ಶಬ್ದಗಳಿಂದ ಸ್ಫುಟಿತವಾಗುವುವು. ಇಂಗ್ಲಿಶದಲ್ಲಿ Killing time ಎನ್ನುವುದಕ್ಕೆ ಕನ್ನಡವನ್ನು ಅರಿಯದ್ದಕ್ಕಾಗಿ, ಸಂಸ್ಕೃತಜ್ಞಾನದ ಸೊಕ್ಕಿಗಾಗಿ ಋತು (=time) ಸಂಹಾರ (=killing) ಎಂದುಕೊಂಡಿದ್ದೇನೆ.

ಯಾರಾರು ಈ ಋತುಸಂಹಾರವನ್ನು ಓದುವರೋ ಅವರಿಗೆ ನಾಯುವಾರೋಗವನ್ನೂ (ಎಂದರೆ ಆಯುರಾರೋಗ್ಯ) ಸಂತತಿಯಭಿವೃದ್ಧಿಯನ್ನೂ ನಿರಂತರನಿರುದ್ಯೋಗವನ್ನೂ ವಂಶಪರಂಪರಾ ಕಾರಕೂನಿಕೆಯನ್ನೂ ಕೊಟ್ಟು ಆಶಿರ ಒದಿಸಲೆಂದು ಆ ದಯಾ (ಚಳಿಗಾಲದಲ್ಲಿ) ಘನನನ್ನು ಬೇಡಿ—ಬೇಡಿ—ಕೊನೆಗೆ 'ರಾಮ್‌ರಾಮ್' ಎನ್ನೋಣ.

೭. ಕಾಲ ತಿರುಗಿದರೆ — —
— — ರಾಮ್-ರಾಮ್-ರಾಜ್ಯ

ಕಾಲ ತಿರುಗಿದರೆ ಆದರ ಜೊತೆಗೆ ತಲೀನೂ ತಿರಗಬೇಕು ಅಂತ ನೀವೆಲ್ಲಾ ಹೇಳ್ತೀರಿ ಅನ್ನೋದು ನನಗೆ ಗೊತ್ತು. ಆದರೆ ನಾನು ಹೇಳೋದು ಆ ಕನ್ನಡ ಕಾಲಲ್ಲ, ಸಂಸ್ಕೃತ ಕಾಲ; ಸಂಸ್ಕೃತ ಕಾಲ (ಅಂದ್ರೆ ಹೊತ್ತು, ಸಮಯ) ತಿರುಗಿದರೆ ಏನಾಗ್ಬಹುದು? ಮೊದಲೇ ಹೇಳಿಟ್ಟಿರತೀನಿ ನಾನು; ಇಂದಿನ ಅನೇಕ ನಿರುದ್ಯೋಗಿ ಕಲಿತವರೊಳಗೆ ನಾನೊಬ್ಬ. ವಿಚಾರ ಮಾಡಿ ಹೊತ್ತು ಕಳೀತೀನಿ, ಹೊತ್ತು ಕಳೆಯೋದಕ ವಿಚಾರ ಮಾಡತೀನಿ. ಇಲ್ಲಿ ಬರೆಯೋದು ಅಂಥಾ ವಿಚಾರ. ಇಲ್ದಿದ್ರೆ ಇದೇನೊ ಇಲೆಕ್ಶನ್ ಮ್ಯಾನಿಫೆಸ್ಟೊ ಅಂತ ತಿಳಿದು 'ನೀವು ಮೊನ್ನೆ ಹಾಗೆ ಬರೆದಿದ್ದಿರಿ, ಅದರಂತೇನೇ ಮಾಡ್ಬೇಕು, ಆದಾಗದಿದ್ದರೆ ನಿಮ್ಮ ಬರೆಯೋ ಕೆಲಸಕ್ಕೆ ರಾಜೀನಾಮೆ ಕೊಡ್ಬೇಕು' ಅಂತ ತಾವು ಮಹಾಶಯರು ಯಾರಾದರೂ ಹಟ ಹಿಡಿದೀರಿ! ಆದಕೇ ಮುಂಚೇನೇ ಹೇಳಿಡತೀನಿ...... ಸಂಸ್ಕೃತಕಾಲ ತಿರುಗಿದರೆ ಏನಾಗ್ಬಹುದು — ಅಂತ ನನ್ನ ವಿಚಾರ. ಇಂದಿನ ಕಾಲ ಸಂಸ್ಕೃತದೊಳಗ ಕಲಿ-ಕಾಲ. ಇದು ತಿರುಗಿತೂ ಅಂತ ತಿಳಿಯೋಣ. ರಾಮನ— ಅಂದ್ರ ಸಾಕ್ಷಾತ್ ಶ್ರೀರಾಮಚಂದ್ರನ— ಕಾಲ ಬಂದಿತು ಅಂತ ತಿಳಿಯೋಣ. ಬಂದ್ರೆ ಏನಾಗ್ಬಹುದು? ನಮ್ಮ ದೇಶದ ತುಂಬೆಲ್ಲಾ ರಾಮರಾಜ್ಯ ಬೆಳೆಯಬಹುದಲ್ಲ? 'ರಾಮರಾಜ್ಯ' ಅನ್ನೋ ಶಬ್ದ ಕೇಳಿದ ಮಾತ್ರಕ್ಕೇ ಪಂಡಿತ ಜವಾಹರಲಾಲರಿಗೆ ಸಿಟ್ಟು ಅಂತೆ. ಹಾಗೆ ಕೇಳಿದರೆ ನಮಗ-ನಿಮಗ ಕೂಡಾ ಸಿಟ್ಟು ಬರಬಹುದು.

'ರಾಮರಾಜ್ಯ' ಅಂದ್ರೆ ನಮಕಿಂತ ಸರ್ವೋತ್ಕೃಷ್ಟವಾದ, ಸಕಲಾಂಗ ಪರಿಪೂರ್ಣವಾದ ರಾಜ್ಯ ಅನ್ನೋ ಅರ್ಥದೊಳಗ ಸಾಮಾನ್ಯ ಜನರು ಉಪಯೋಗ ಮಾಡ್ತಾರೆ. ನಾನು ಆ ಶಬ್ದ ಉಪಯೋಗಿಸೋದು ಆ ಅರ್ಥದಲ್ಲಿ ಅಲ್ಲ. ಹಿಂದಿನವರಿಗಿಂತ ಇಂದಿನವರ ರಾಜ್ಯ ಎಂದಿಗೂ ಕೆಟ್ಟ ಇರೋದು ಶಕ್ಯ ಇಲ್ಲ ಅಂತ ಪಂಡಿತ ಜವಾಹರರಂತೆ ನನ್ನೂ ಅಭಿಪ್ರಾಯ ಇದೆ. ರಾಜ್ಯಕ್ಕಾಗಿ ಹೆಂಡತೀನ್ನ ಬಿಟ್ಟದ್ದು ಅನ್ಯಾಯನೋ, ಏನು ಹೆಂಡತಿಗಾಗಿ (ಎಂಟನೇ ಎಡ್ವರ್ಡರಂತೆ) ರಾಜ್ಯ ಬಿಟ್ಟದ್ದು ಅನ್ಯಾಯನೊ—ಯಾರು ಹೇಳಬಲ್ಲರು? ರಾಜ್ಯಕ್ಕಾಗಿ ಮದಿವೆ ಆದ ಹೆಂಡತೀನ್ನ ಮಂದಿಯ ಮಾತ ಕೇಳಿ ರಾಮ ಬಿಟ್ಟರೆ, ಮಂದಿ ಬಿಟ್ಟ (divorced) ಹೆಂಡತೀನ್ನ ಮದಿವೆ ಆಗೋದಕ್ಕೆ ರಾಜ್ಯ ಬಿಟ್ಟರು ಎಂಟನೆಯ ಎಡ್ವರ್ಡರು! ಯಾವ್ದು ನ್ಯಾಯ? ಯಾವ್ದು ಅನ್ಯಾಯ? ಆಯಾ ಕಾಲಕ್ಕ ಆಯಾ ನ್ಯಾಯ; ಭಿನ್ನರುಚಿರ್ಹಿ ಲೋಕಃ; ಆದ್ದರಿಂದ 'ರಾಮರಾಜ್ಯ' ಅಂದ್ರ 'ರಾಮನ ರಾಜ್ಯ' ಅಂತ ಇಷ್ಟೆ ನನ್ನ ಅರ್ಥ. ಈ ಅರ್ಥಕ್ಕೆ ಸರಿಯಾಗಿ, ಸಂಸ್ಕೃತ ಕಾಲ ತಿರುಗಿ, ರಾಮರಾಜ್ಯ ಬಂದ್ರೆ ಏನಾಗ್ಬಹುದು—ಎಂಬೀ ಮೂಲ ಪ್ರಶ್ನೆಯ ಕಡೆಗೆ ಇನ್ನು ತಿರುಗು ಮಂಥವರಾಗೋಣ.

ರಾಮನ ರಾಜ್ಯ ಬಂದ್ರೆ ದೇಶದೊಳಗೆಲ್ಲಾ ರಾಕ್ಷಸರೇ ತುಂಬ್ತಾರೆ ಅಂತ ನನ್ನ ಮೊದಲನೆಯ ವಿಚಾರ. ಯಾಕೆ—ಅಂತ ನೀವು ಕೇಳ್ಬಹುದು. ಅದಕ್ಕ ನನ್ನ ಉತ್ತರ ಹೀಗೆ—ರಾಕ್ಷಸರು ಇದ್ದಿದ್ದಿಲ್ಲಾ ಅಂದ್ರ ರಾಮನೆ ಇರತಿದ್ದಿಲ್ಲಾ. ಅಹುದೊ ಅಲ್ಲೊ? ರಾಕ್ಷಸರು ಇದ್ದರು, ಇನ್ನೂ ಬಹಳ ದಿವಸ ಇರಬೇಕೂ ಅಂತ ಹೆಣಗತಾ ಇದ್ದರು, ತಮ್ಮ ಹೊರತು ಬೇರೆ ಯಾರೂ ಇರ್ಬಾರದೂ ಅಂತ ಕೊಲೆ-ಸುಲಿಗೆ ಮಾಡ್ತಾ ಇದ್ದರು, ಅವರ ಉಪಟಳ ತಡೆಯಬೇಕಾಯ್ತು, ಅದಕ್ಕೆ ಶ್ರೀರಾಮಚಂದ್ರನ ಅವತಾರ ಬೇಕಾಯಿತು. ಅತ ಏವ ರಾಮರಾಜ್ಯ ಇದ್ದರೆ ರಾಕ್ಷಸರು ಇರಲೇಬೇಕು ಅಂತ ಸಿದ್ಧ ಆದ ಹಾಗ ಆಯ್ತು. ಇನ್ನು ಮುಂದೆ ರಾಕ್ಷಸರು ಇರೋದೇ ನಿಶ್ಚಿತ ಆದ್ರೆ ಅವರ ವ್ಯವಸ್ಥಾ ಏನು? ಅವರು ಇದ್ದುಕೊಳ್ಳೋದು ಎಲ್ಲಿ? ಹಿಂದಿನ ಕಾಲದೊಳಗ ದಕ್ಷಿಣ ಹಿಂದುಸ್ಥಾನ

ದೊಳಗ ಇದ್ದರಂತೆ. ಆದರ ಈಗ ದಕ್ಷಿಣ ಹಿಂದುಸ್ತಾನದೊಳಗ ತಮಿಳು-ತೆಲುಗು-ಮಹಾರಾಷ್ಟ್ರ ಮೂರು ಪ್ರಬಲ ಜನಾಂಗ ಇವೆ. ಇವರು ಯಾರನೂ ಹತ್ತಿರ ಹಾಯಗೊಡೋದಿಲ್ಲ. ಅಥವಾ—ಹಾಂ! ಒಂದು ಮಾತು ಶಕ್ಯ ಇದೆ. ಯಾರೇ ಇದ್ದರೂ ತಮ್ಮೊಳಗೆ ಸೇರಿಕೊಂಡರೆ ಮಾತ್ರ ಈ ಮೂರು ಜನಾಂಗದವರು ಅವರನ್ನ ಇರಗೊಡಬಹುದು. ಅಂದ್ರೆ ರಾಕ್ಷಸರು ತಾವು ಬೃಹನ್ಮಹಾರಾಷ್ಟ್ರದವರಾಗಲಿ ತಮಿಳರಾಗಲಿ ತೆಲುಗರಾಗಲಿ ಅಂತ ಹೇಳಿಕೊಳ್ಳಲಿಕ್ಕೆ ಸಿದ್ಧರಾದರೆ ಅವರಿಗೆ ದಕ್ಷಿಣ ಹಿಂದುಸ್ತಾನದಲ್ಲಿ ಇದ್ದುಕೊಳ್ಳೋ ಜಾಗೆ ಬಾಡಿಗೆ ಇಲ್ಲದೆ ದೊರೆಯಬಹುದು. ಆದರೆ ಇನ್ನೂ ಒಂದು ತೊಡಕು. ರಾಕ್ಷಸರು ಆ ಮಾತಿಗೆ ಒಪ್ಪಿಕೊಂಡರೆ ಈ ಮೂರೂ ಜನಾಂಗದವರು 'ಇವರು ನಮ್ಮವರು—ಇವರು ನಮ್ಮವರು' ಅಂತ ಎಳದಾಡತಾ ಜಗಳ ಹೂಡಬಹುದು. ಕೊನೆಗೆ ರಾಕ್ಷಸರು ಯಾರ 'ಪೈಕಿ' ಅಂತ ನಿರ್ಣಯಿಸಲಿಕ್ಕೆ ಸರಕಾರದವರೂ ಕಾಂಗ್ರೆಸದವರೂ ತಂತಮ್ಮ ಕಮಿಟಿಗಳನ್ನು ನಿಯಮಿಸಬೇಕಾಗುವುದು. ಇವೆರಡೂ ಕಮೀಟಿಗಳ ನಿರ್ಣಯ ಒಂದೇ ಆಗ್ಬೇಕಾಗುವುದು. ಅಲ್ಲಿಯವರೆಗೆ ರಾಕ್ಷಸರಿಗೆ ಇರಲಿಕ್ಕೆ ಚಪ್ಪರ, ತಿನ್ನಲಿಕ್ಕೆ ತೊಪ್ಪಲ ಇಷ್ಟಾದರೂ ವ್ಯವಸ್ಥಾ ಬೇಕಲ್ಲ? ಈ ವ್ಯವಸ್ಥಾ ಎಲ್ಲಿ ದೊರೆಯಬೇಕು? ಅರ್ಥಾತ್ ನಮ್ಮ ಉದಾರಹೃದಯದ ಕರ್ನಾಟಕದಲ್ಲಿ! ನಾವು ಯಾರ 'ಪೈಕಿ'ನೂ ಅಲ್ಲ, ಎಲ್ಲರ 'ಪೈಕಿ' ಅಂದರೂ ನಡಿಯೋದು. ಆದ್ದರಿಂದ ರಾಮರಾಜ್ಯ ಬಂದರೆ ಕರ್ನಾಟಕದ ತುಂಬೆಲ್ಲಾ ರಾಕ್ಷಸರು ಇರಬೇಕಾಗೋದು ಅಂತ ಮೊದಲನೆಯ ವಿಚಾರದ ಚರ್ಚೆ.

ರಾಕ್ಷಸರ ವ್ಯವಸ್ಥಾ ಆಯ್ತು. ಇನ್ನು ಋಷಿಗಳ ಗತಿಯೇನು? ಯಾಕಂದರೆ— ಇದೊಂದು ಮಹತ್ವದ ಚರ್ಚೆ, ಹಾಳು ಹರಟೆ ಅಲ್ಲ—ಋಷಿಗಳಿಲ್ಲದಿದ್ದರ ರಾಮನ ಅವತಾರನೂ ಇಲ್ಲ; ರಾಕ್ಷಸರ ಅವತಾರನೂ ಇಲ್ಲ. ಋಷಿಗಳಿರಬೇಕು, ಅವರು ತಪಸ್ಸು ಮಾಡತಿರಬೇಕು, ರಾಕ್ಷಸರು ಅವರನ್ನ ಕಾಡತಿರಬೇಕು, ಆ ಮ್ಯಾಲೆ ರಾಮನ ಅವತಾರ! ಋಷಿಗಳು ತಮ್ಮ ಸಂರಕ್ಷಣಾ ತಾನೇ ಯಾಕ ಮಾಡಕೋಬಾರದು ಅಂತ ನೀವು ಕೇಳ್ಬಹುದು. ಆದರ ಋಷಿಗಳು ದಿನಕ್ಕ ಎರಡು ಹೊತ್ತು ಊಟ

ಮಾಡುತ್ತಿದ್ದಿಲ್ಲ ಅಂಬೋದನ್ನ ಮರೆಯಬೇಡಿರಿ; ಅದಕ್ಕ ಅವರ ಮೈಯೊಳಗ ಅಷ್ಟೊಂದು ತ್ರಾಣ ಇರಲಿಕ್ಕಿಲ್ಲ. ನಿಂತಲ್ಲೇ ನಿಂತುಬಿಡೋದು, ಅರ್ಥಾತ್ ತಪಸ್ಸು, ಇದನಷ್ಟೇ ಋಷಿಗಳು ಮಾಡಬಲ್ಲರು. ಋಷಿಗಳು ತಪಸ್ಸು ಮಾಡಿದರ ರಾಕ್ಷಸರದೇನು ಹೊಟ್ಟೆಕಡಿಯೋದು ಅನ್ನೋ ವಿಚಾರಾನೂ ಕೆಲವರ ತಲೆಗೆ ತಾಕಬಹುದು. ನನಗೆ ತಿಳಿದ ಮಟ್ಟಿಗಂತೂ ಇಷ್ಟೇ ಕಾರಣ ಅನಿಸ್ತದೆ. ರಾಕ್ಷಸರಿಗೆ ಏನಾದರೊಂದು ಉದ್ಯೋಗ ಬೇಕು; ಋಷಿಗಳಿಗೆ ಯಾವ್ದೂ ಉದ್ಯೋಗ ಬೇಡ (ನಿಂತಲ್ಲೇ ನಿಲ್ಲೋದೊಂದನ್ನ ಬಿಟ್ಟು); ನಿರುದ್ಯೋಗಿಗಳನ್ನ ಕಂಡರೆ ಉದ್ಯೋಗಿಗಳ ಹೊಟ್ಟೆ ಕಡಿಯದೆ ಬಿಟ್ಟೀತೇನು? ಇದಲ್ದೆ ಇನ್ನೂ ಒಂದು ಅತ್ಯಂತ ಮಹತ್ತ್ವದ ಕಾರಣ. ರಾಕ್ಷಸರು ಕಾಡದಿದ್ದರೆ ರಾಮನ ಅವತಾರನೆ ಆಗೋಹಾಂಗಿಲ್ಲ? ಆಗದಿದ್ದರ ಇಲ್ಲ ಅಂತೂ ಅನ್ನೋಹಾಂಗಿಲ್ಲ; ಯಾಕಂದರೆ ಸಂಭವಾಮಿ ಯುಗೇ ಯುಗೇ ಅಂತ ಬರೆದುಕೊಟ್ಟಾನೆ ದೇವರು! ಬರೆದುಕೊಟ್ಟವ ಕೃಷ್ಣ, ಅದೂ ದ್ವಾಪರಯುಗದೊಳಗ, ಅದಕಾಗಿ ಅದಕೂ ಮುಂಚಿನ ತ್ರೇತಾಯುಗದೊಳಗ ರಾಮ ಹುಟ್ಟಲಿಕ್ಕೆ ಏನು ಕಾರಣ—ಅಂತ ನೀವು ಬೆರಗಾಗಬಹುದು. ಏನೂ ಕಾರಣ ಇಲ್ಲ ಅಂತೇ ರಾಕ್ಷಸರ ಕಾರಣದಿಂದ ರಾಮ ಅವತಾರ ತಾಳ್ತಾನೆ ಅಂತ ನಾನು ಮೊದಲೇ ಹೇಳಿದ್ದೆ. ನನ್ನ ಮಾತಿನ ಮರ್ಮ ತಿಳಿದುಕೊಳ್ಳದೇನೇ ನೀವು ವಾದ ಬೆಳೆಸಿದಿರಿ, ನಾನು ಏನು ಹೇಳತಿದ್ದೆನೊ ಅದನ್ನ ಮರೆಸಿದಿರಿ. ಹೋಗಲಿ. ಇನ್ನೂ ಒಂದು ಸಂಶಯ? ರಾಕ್ಷಸರು ಬೇಕಾದವರ್ನ ಕಾಡಿದರ ನಡೀತಿದ್ದಿಲ್ಲೇನೊ, ಋಷಿಗಳನ್ನೇ ಕಾಡಬೇಕಾಗಿತ್ತೇನೊ....', ಅಂತೇನ್ಲಿ? ಬೇಕಾದವರ್ನ ಕಾಡಿದರ ಅವರು ತಿರುಗಿ ಕಾಡಬಹುದು; ಕಾಡಿನೊಳಗ ಕೈಲಾಗದ ಋಷಿಗಳನ ಕಾಡಿದರ ತಿರುಗಿ ಏಟು ಬಿದ್ದೀತು ಅನ್ನೋ ಹೆದರಿಕೆ ಇಲ್ಲ. ಋಷಿಗಳ ಶಾಪ ಕೂಡ ರಾಕ್ಷಸರಿಗೆ ತಟ್ಟೋದು ಸುಲಭ ಇದ್ದಿರಲಿಲ್ಲ. ರಾಕ್ಷಸರು ಮಾಯಾವಿಗಳು, ಬೇಕಾದ ರೂಪನ್ನು ಧರಿಸುತ್ತಿದ್ದರು. "ಏ ರಾಕ್ಷಸಾ, ನೀನು..." ಅಂತ ಶಾಪ ಹೊರಬೀಳೂದರೊಳಗ ರಾಕ್ಷಸ ಹೋಗಿ ಒಂದು ಹೆಂಸಿನ ರೂಪ ನಿಲ್ತಿತ್ತು. 'ಏ ರಮಣಿಯೇ, ನೀ....' ಅನ್ನೋದರೊಳಗ

ಹೆಂಗಸು ಹೋಗಿ ಆನೆ ನಿಲ್ಲತಿತ್ತು. "ಏ ಆನೆಯೇ...." ಅನ್ನೋದರೊಳಗ ಮತ್ತೊಂದೇನೋ ನಿಲ್ಲತಿತ್ತು! ಅಂತು ಶಾಪ ಕೊಟ್ಟ ಪತ್ತಾತ್ಕ (ವಿಶ್ವಾಸಕ್ಕೆ) ಹೋಗಿ ಮುಟ್ಟೇತು ಅನ್ನೋದರ ಖಾತ್ರಿ ಕಡಿಮೆ. ಇವೆಲ್ಲಾ ಕಾರಣಕ್ಕ ರಾಕ್ಷಸರು ಋಷಿಗಳನ್ನ ಕಾಡತಿದ್ದರು.ಆದುದರಿಂದ ರಾಮನ ರಾಜ್ಯಕ್ಕೆ ಋಷಿಗಳಿರೋದು ಅಗತ್ಯ ಅನ್ನೋ ಮಾತು ಸಿದ್ಧ ಆದ ಹಾಗ ಆಯಿತು. ಅಂದರ ಈಗ ನಮ್ಮಲ್ಲಿ ರಾಮನರಾಜ್ಯ ಬರೋದಾದರ ಋಷಿಗಳೂ ಬರಲಿಕ್ಕೆಬೇಕು ಅಂದ ಹಾಗಾಯಿತು. ಋಷಿಗಳು ಬಂದರೆ ಇಳಿದುಕೊಳ್ಳೋದೆಲ್ಲಿ ಅನ್ನೋದು ಮುಖ್ಯ ಪ್ರಶ್ನೆ. ಹಾಗನೋಡಿದರೆ ಅವರಿಗೆ ನಿಂತಲ್ಲೇ ನಿಂತುಕೊಳ್ಳಲಿಕ್ಕೆ-ಅಂದ್ರ ತಪಸ್ಮಾಡಲಿಕ್ಕೆ-ಜಾಗ ಸಿಕ್ಕರೆ ಸಾಕು. ಆ ಜಾಗೆ ಎಲ್ಲಿ? ತಪಸ್ಸಿಗಾಗಿ ಋಷಿಗಳು ಯಾವಾಗಲೂ ಮೂಗು ಮುಚ್ಚಿಕೊಂಡೇ ನಿಲ್ಲೋ ಹಾಗಿದ್ದರೆ ನಮ್ಮೊರಲ್ಲಿ ನಿಮ್ಮೊರಲ್ಲಿ ಹಿಂದುಸ್ತಾನದ ಬೇಕಾದ ಊರಲ್ಲಿ ವಿಶೇಷತಃ ಮ್ಯುನಿಸಿಪಾಲಿಟಿ ಇದ್ದ ಊರಲ್ಲಿ ಬಂದು ನಿಲ್ಲಬಹುದು. ಆದರೆ ಎಲ್ಲಾ ತಪಸ್ಸಿನೊಳಗೂ ಮೂಗನೆ ಮುಚ್ಚಬೇಕು ಅನ್ನೊ ನಿಯಮ ಇಲ್ಲ. ಕೆಲವು ತಪಸ್ಸಿನೊಳಗೆ ಒಂದೇ ಕಾಲಮ್ಯಾಲೆ ನಿಲ್ಲಬೇಕಾಗ್ತದೆ, ಆಗ ಇನ್ನೊಂದ ಕಾಲನ್ನ ಎಲ್ಲಿ ಇಡಬೇಕು ಅನ್ನೋ ಪ್ರಶ್ನೆ; ಕೆಲವದರೊಳಗ ತಲೀ ಮ್ಯಾಲೆ ನಿಲ್ಲಬೇಕಾಗುತ್ತದೆ, ಆಗ ಇದ್ದ ಎರಡೂ ಕಾಲಗಳನ್ನು ಎಲ್ಲಿ ಇಡಬೇಕು ಅನ್ನೊ ಪ್ರಶ್ನೆ; ಕೆಲವು ಸಲ ಬೆನ್ನ ಮ್ಯಾಲೆಯೆ ಮಲಗಬೇಕಾಗುತ್ತದೆ, ಆಗ ಹೊಟ್ಟೆಯ ಗತಿ ಏನು-ಅನ್ನೋ ಪ್ರಶ್ನೆ; ಹೀಗೆ ಅನೇಕ ಪ್ರಶ್ನೆಗಳು ಉದ್ಭವಿಸುವಾಗ ಅವುಗಳಿಗೆಲ್ಲಾ ಸಮಾಧಾನ ದೊರಕುವಂಥಾ ಸ್ಥಾನ ಬೇಕು. ಅಂತಹ ಸ್ಥಾನ ದೊರಕಿದಲ್ಲಿ ಋಷಿಗಳು ಬಂದು ಬಿಡಬಹುದು. ಸುದೈವದಿಂದ 'ರಾಮಾನುಜಾಚಾರ್ಯರಾಶಂಕರಾರ್ಯ ಮೇನ್ಸ್–' ಬತ್ತಿಗಳಿಂದ ಉಜ್ವಲವಾದ ನಮ್ಮ ಕನ್ನಡ ನಾಡೆ ಋಷಿಗಳಿಗೆ ಯೋಗ್ಯ ಅಂತ ನನಗನಿಸ್ತದೆ. ಯಾಕಂದರೆ ನಾವು ಯಾವಾಗಲೂ ಬರಗಾಲ ಅನ್ನೋ ಒಂದೇ ಕಾಲಿನ ಮ್ಯಾಲೇ ನಿಂತೀವಿ, ಆದ್ದರಿಂದ ನಮ್ಮಲ್ಲಿ ಋಷಿಗಳ ಇನ್ನೊಂದು ಕಾಲು ಇಡಲಿಕ್ಕೆ ಉಳಿದ ದೇಶದಕ್ಕಿಂತ ಹೆಚ್ಚು ಜಾಗದೊರೆಯೋದು. ಇದಲ್ದೆ ನಮ್ಮ ಹೊಟ್ಟೆಯ ಮ್ಯಾಲೆ ಹೊರಗಿನವರು ಕಾಲಿ

ಟ್ಟಿಟ್ಟ ಸವಂಗ ರೂಢಿ ಆಗದೆ, ಆದ್ದರಿಂದ ಋಷಿಗಳೂ ಅವಶ್ಯ ಬಿದ್ದ
ತಮ್ಮ ಎರಡೂ ಕಾಲ ನಮ್ಮ ಹೊಟ್ಟೆಯ ಮ್ಯಾಲೆ ಇಡಬಹುದ
ಇನ್ನೊಂದು ಮಾತಂದರೆ, ನಮ್ಮಲ್ಲಿ ದೊಡ್ಡ ದೊಡ್ಡ ನದಿ ಇದ್ದ ಪ
ಪಾಶ್ಚಾತ್ಯ ದೇಶದೊಳಗೂ ಇಲ್ಲ; ಆದ್ದರಿಂದ ಋಷಿಗಳಿಗೆ ಆಚಮನಕ್ಕೆ
ಆಗಲಿ ಆಹಾರಕ್ಕಾಗಲಿ ನೀರಿನ ತುಟಾಗ್ರತೆ ಇಲ್ಲ. ಇದಲ್ದೆ ಕರ್ನಾಟ
ದೊಳಗೆ ಬಂದಿದ್ದ ಮ್ಯಾಲೆ ಹೊಟ್ಟೆಯ ಗತಿ ಏನು ಅನ್ನೋ ಪ್ರಶ್ನಾನ
ಹೋಗೋದಿಲ್ಲ; ಯಾಕಂದರೆ ಕರ್ನಾಟಕದವರಿಗೆ ಹೊಟ್ಟೆ ಇಲ್ಲ ಅನ್ನೋ
ಮಾತು ಪ್ರಸಿದ್ಧ ಸಿದ್ಧಾಂತ ಆಗಿದೆ. ಇನ್ನೂ ಒಂದು, ಕರ್ನಾಟಕದ
ದ್ದರೆ ಋಷಿಗಳು ಒಂದು ಹೊಸ ತರದ ಉಗ್ರ ತಪಸ್ಸನ್ನೇ ಶೋಧಿ
ಬಹುದು. ತಪಸ್ಸಿನೊಳಗೆ ತಲೆ–ಕಾಲು ಮ್ಯಾಲೇ ಇರಲಿ ಕೆಳಗೇ ಇರಲಿ
ತಲೆ ಇದ್ದಲ್ಲಿ ಕಾಲು, ಕಾಲು ಇದ್ದಲ್ಲಿ ತಲೆ, ಅಂತೂ ಇಡಿಯ ದೇಹ
ಒಂದೇ ಕಡೆಗೇ ಋಷಿಗಳು ಇನ್ನೂ ತನಕ ಇಟ್ಟದ್ದು. ಆದರ ನಮ್ಮಲ್ಲಿ
ಬಂದರ ತಲೀ ಮುಂಬಯಿಯೊಳಗ, ಹೊಟ್ಟೆ ಮೈಸೂರೊಳಗ, ಕಾಲು
ಮದ್ರಾಸದೊಳಗ ಇಟ್ಟ ಋಷಿಗಳೆಲ್ಲ ಘೋರ ತಪಸ್ಸನ್ನ ಮಾಡ
ಬಹುದು, ರಾಕ್ಷಸರ ' ಫಜೀತಿ ' ಮಾಡಬಹುದು. ಇತ್ತ ಋಷಿಯನ್ನ
ಕಡಿದುಹಾಕಬೇಕು ಅಂತ ಸಿಟ್ಟಿನಿಂದ ಬರ್ತಾನೆ ರಾಕ್ಷಸ, ಇತ್ತ ಬಂದ
ನೋಡಿದರೆ ಋಷಿ ಅವಯವ ಕಡಿದುಕೊಂಡೇಬಿದ್ದಾನೆ ! ಹಹ ! ಇದಲ್ಲ
ಇನ್ನೂ ಒಂದು ' ಫಜೀತಿ ' ರಾಕ್ಷಸರದು. ಋಷಿಗಳು ಯಾರು
ಅನ್ನೋದು ಕೂಡಾ ತಿಳಿಯಲಿಕ್ಕಿಲ್ಲ ರಾಕ್ಷಸರಿಗೆ ! ನಿಂತಲ್ಲೇ ನಿಂತು
ಕೊಂಡ ನಿರುದ್ಯೋಗಿಗಳು ಋಷಿಗಳು ಅಂತ ರಾಕ್ಷಸರ ಕಲ್ಪನಾ; ಆದ
ನಮ್ಮಲ್ಲಿ ಅಂತಹರು ಬೇಕಾದಷ್ಟು ಜನ ಇದ್ದಾರೆ. ಇವರೇ ಅವರು
ಅಂತ ತಿಳಿಯೋ ಬಗೆ ಹ್ಯಾಗೆ ! ಮುದುಕರಿದ್ದ ನಿರುದ್ಯೋಗಿಗಳ
ಋಷಿಗಳು, ತರುಣ ನಿರುದ್ಯೋಗಿಗಳು ದೇಶಸ್ಥರು– ಅಂತ ನಾವೇನೂ
ಹೇಳ್ಬಹುದು. ಆದರೆ ಋಷಿಗಳೊಳಗೆ ತರುಣರು ಇಲ್ಲೇ ಇಲ್ಲಾ ಅಂತ
ಯಾತರ ಮೇಲಿಂದ ? ಇವೆಲ್ಲ ಅನುಕೂಲತೆಗಳನ್ನು ನೋಡಿಕೊಂಡ
ಋಷಿಗಳು ನಮ್ಮ ಕರ್ನಾಟಕದೊಳಗೇ ಬಂದು ಇದ್ದು ಬಿಡೋದು
ಒಳಿತು ಅನ್ನೋ ನಿರ್ಣಯ ಆಧಾಂಗ ಆಯ್ತು.

ಇನ್ನು ರಾಮನ ರಾಜ್ಯಕ್ಕೆ ಪೂರ್ವತಯಾರಿಯಾದ ಒಂದೇ ಒಂದು ಮಾತು ಉಳಿಯಿತು–ಧನುರ್ಭಂಗ, ಬಿಲ್ಲನ್ನು ಮುರಿಯೋದು. ರಾಮ ಬಿಲ್ಲು ಮುರಿದಿದ್ದಿಲ್ಲ ಅಂದರ ಸೀತಾನ ಕೂಡ ಮದಿವೆ ಆಗತಿದ್ದಿಲ್ಲ. ಸೀತಾನ್ನ ಮದುವೆ ಆಗಿದ್ದಿಲ್ಲಾ ಅಂದರ ಆಕೆಯ ಸಲುವಾಗಿ ರಾಮ ರಾವಣನ ಜೋಡಿ ಯುದ್ಧ ಆಡಿ ರಾವಣನ್ನ ಕೊಲ್ಲತಿದ್ದಿಲ್ಲ, ಅರ್ಥಾತ್ ರಾಮಾವತಾರದ ಮುಖ್ಯ ಧ್ಯೇಯನೇ ಸಾಧಿಸುತ್ತಿದ್ದಿಲ್ಲ ಅಂದ ಹಾಂಗ ಆಯ್ತು. ಇದರಿಂದ ನಮ್ಮಲ್ಲಿ ಈಗ ರಾಮರಾಜ್ಯ ಬಂದರ ಅದಕೂ ಮುಂಚೆ ಬಿಲ್ಲು ಮುರಿಯಲಿಕ್ಕೇ ಬೇಕಾಗುತ್ತದೆ. ಇದೆಂಥ ಮಾತು? ರಾಮನ ಅವತಾರ ಆಗೋದು ಹೆಚ್ಚೋ? ಬಿಲ್ಲು ಮುರಿಯೋದು ಹೆಚ್ಚೋ? ಸೀತಾಕಾಂತಸ್ಮರಣ ಜಯ ಜಯ ರಾಮ ಅನ್ನೋದು, ಶಾರದಾಬಿಲ್ಲು ಮುರಿಯೋದು!

ಇದೇಅಲ್ಲವೆ ರಾಮ್-ರಾಮ್-ರಾಜ್ಯ?

ದಿ ಯುನಾಯಿಟೆಡ್ ಕರ್ನಾಟಕ
ಇನ್ಶೂರೆನ್ಸ ಕಂ., ಲಿಮಿಟೆಡ್

ಹೆಡ್ ಆಫೀಸ: ಧಾರವಾಡ

	ರೂ.
ಈ ವರೆಗೆ ಸರಕಾರದ ಆಧಾರ (Security) ಪತ್ರಗಳಲ್ಲಿ	೬೦,೦೦೦
ಪಾಲಿಸಿದಾರರಿಗೆ ನಿರ್ಮಿಸಿದ ಜೀವನಿಧಿ (Life fund)	೨೪,೧೬೬
ಈ ವರೆಗೆ ಒಟ್ಟು ಮಾಡಿದ ವಿಮಾ ಕಾರ್ಯ	೧೨,೦೦,೦೦೦
ಜನರು ಪಡೆದ ಒಟ್ಟು ಪಾಲು ಬಂಡವಾಳು	೬೭,೬೫೦
ಮರಣಹೊಂದಿದವರ ವಾರಸದಾರರಿಗೆ ಕೊಟ್ಟ ಹಣ	೫,೮೪೫

ಪ್ರಥಮ ಮೌಲ್ಯಮಾಪನ (Valuation) ದಲ್ಲಿಯೇ ವಿಮಾದಾರರಿಗೆ ಲಾಭವನ್ನು (Bonus) ಹಂಚಿದೆ. ಕ್ಲೇಮು ಹಣವನ್ನು ಕೊಡುವುದರಲ್ಲಿ ತ್ವರೆಯುಳ್ಳದ್ದು

ಕರ್ನಾಟಕದ ಎಲ್ಲ ಭಾಗಗಳಲ್ಲಿ

ಇದರ ಪಾಲುಗಾರರೂ ಪಾಲಿಸಿದಾರರೂ ಇದ್ದುದರಿಂದ

ಇದು ಕನ್ನಡ ನಾಡಿನ ಪ್ರಾತಿನಿಧಿಕ ಸಂಸ್ಥೆಯಾಗಿದೆ

ಯುನಾಯಿಟೆಡ್ ಕರ್ನಾಟಕದ ಪಾಲನ್ನೂ ಪಾಲಿಸಿಯನ್ನೂ ಪ್ರತಿಯೊಬ್ಬ ಕನ್ನಡಿಗನು ಪಡೆಯಲೇ ಬೇಕು

ತುಲನಾತ್ಮಕ ದೃಷ್ಟಿಯಿಂದ ಆಡಳಿತದ ವೆಚ್ಚವು ತೀರ ಕಡಿಮೆ
ಏಜಂಟರಿಗೆ ತುಂಬಾ ಕಮಿಶನ್ — ಏಜಂಟರಾಗಲು ಬರೆಯಿರಿ